# ಅಧ್ಯಾಯ 22

# ಅಂತಿಮ ಬುದ್ಧಿವಾದಗಳು

ಪ್ರಕಟನೆ ಪುಸ್ತಕದ ಅಂತಿಮ ಅಧ್ಯಾಯದ ಕುರಿತಾಗಿ ನಮ್ಮ ವ್ಯಾಖ್ಯೆಗಳನ್ನು ಆರಂಭಿಸುವದಕ್ಕೆ ಇವುಗಳಿಂತ ಉತ್ತಮವಾದ ಮಾತುಗಳ ಬೇರೆ ಯಾವವೂ ಇರುವದಿಲ್ಲ, ಇವುಗಳನ್ನು Albert Baldinger ನಿಂದ ಎರವಲು ಪಡೆಯಲಾಗಿದೆ:

> ಈಗ ನಾವು ಒಂದು ಸುದೀರ್ಘವಾದ ಮತ್ತು ಸ್ವಲ್ಪ ಕಷ್ಟಕರವಾದ ದಾರಿಯಲ್ಲಿ ಪಯಣಿಸಿದ್ದು ಅದು ನಮ್ಮನ್ನು ... ಮಹಿಮೆಯ ದೇಶವನ್ನು ಒಂದು ಪಕ್ಷಿನೋಟದಲ್ಲಿ ಕಾಣುವಂತಾಗುವ ಹಾಗೆ ಒಂದು "ಎತ್ತರವಾದ ಪರ್ವತ"ಕ್ಕೆ ಕರೆದುಕೊಂಡು ಬಂದಿರುತ್ತದೆ. ನಮ್ಮ ಹಿಂದುಗಡೆಯಲ್ಲಿ "ಅಂತ್ಯಕಾಲಿಕದ ನಾಲ್ಕು ಕುದುರೆಗಳ" ಶವಗಳು, ನಂದಿ ಹೋಗಿರುವ ಜ್ವಾಲಾಮುಖಿಗಳ ಬೂದಿಗಳು, ನಿಂತುಹೋಗಿರುವ ಸುಂಟರಗಾಳಿಗಳಿಂದುಂಟಾದ ಕಸದ ಕುಪ್ಪೆಗಳು, ಸಾಮಾಜಿಕ ಭೂಕಂಪಗಳ ಭಗ್ನಾವಶೇಗಳು, ನಿಗೂಢ [ಬಾಬೆಲಿನ] ಮತ್ತು ಭಕ್ತಿಹೀನ ಸಾಮ್ರಾಜ್ಯಗಳ ಅವಶೇಷಗಳು ಬಿದ್ದಿರುತ್ತವೆ. ಪಾಪ ಹಾಗೂ ಕೆಟ್ಟ ಮತ್ತು ಮಾನವ ಅಭಿಲಾಷೆಗಳು ತಮಗಾಗುಷ್ಟು ಘೋರವಾದದ್ದನ್ನು ಮಾಡಿವೆ. ಅರ್ಮಗೆದ್ದೋನ್ ಮುಗಿದು ಹೋಗಿರುತ್ತದೆ. ದೇವರ ಕುರಿಯಾದಾತನು ಎಲ್ಲೆಲ್ಲಿಯೂ ಜಯಶಾಲಿಯಾಗಿದ್ದಾನೆ. ಇನ್ನೇನು ಉಳಿದಿರುತ್ತದೆ?[1]

ಪ್ರಕಟನೆ 22ನೇ ಅಧ್ಯಾಯವು ವಿಶೇಷ ಮಹತ್ವಪೂರ್ಣತೆಯನ್ನು ಹೊಂದಿದೆ ಯಾಕೆಂದರೆ ಇದು ಬೈಬಲಿನ ಕೊನೆಯ ಮಾತುಗಳನ್ನು, ಪುಸ್ತಕವು Domitianನ ಆಳ್ವಿಕೆಯ ವೇಳೆ ಕ್ರಿ.ಶ. ಸುಮಾರು ೯೬ರ ಸಮಯದಲ್ಲಿ ಬರೆಯಲ್ಪಟ್ಟಿದೆ ಎಂದು ಭಾವಿಸಿಕೊಳ್ಳಲಾಗಿರುವದಾದರೆ, ಇದು ಸರ್ವಕಾಲಕ್ಕೂ ಬರೆಯಲ್ಪಟ್ಟಿರುವ ಕಡೇ ಪ್ರೇರಿತ ಮಾತುಗಳನ್ನು ಒಳಗೊಂಡಿರುತ್ತದೆ. ಮೊದಲ ನೋಟದಲ್ಲಿ, ಅಧ್ಯಾಯವು ಒಂದು ರೀತಿಯಲ್ಲಿ ಸಂಬಂಧವಿಲ್ಲದ್ದಾಗಿ ಕಾಣಿಸುತ್ತದೆ. 22ನೇ ಅಧ್ಯಾಯಕ್ಕಿರುವ ಒಂದು ಸವಾಲು ಏನೆಂದರೆ ಅದರಲ್ಲಿ ಮಾತಾಡುತ್ತಿರುವವನು ಯಾರೆಂಬುದನ್ನು ಹೇಳುವದು ಯಾವಾಗಲೂ ಸುಲಭವಾಗಿರುತ್ತದೆ. ಯೇಸುವಿನ, ಯೋಹಾನನ, ಹಾಗೂ ದೇವದೂತನ ಶಬ್ದಗಳೆಲ್ಲಾ ಒಂದಾಗಿ ಮಿಶ್ರಣಗೊಳ್ಳುತ್ತವೆ. ಮಾತಾಡುತ್ತಿರುವವರು ಯಾರೇ ಆಗಿದ್ದರೂ ಸರಿಯೇ, ಮಾತುಗಳು *ಕರ್ತನಿಂದಲೇ* ಬರುವಂಥವುಗಳಾಗಿವೆ. 22ನೇ ಅಧ್ಯಾಯದಲ್ಲಿನ ವಚನಗಳು ಪದೇ ಪದೇ ಪುಸ್ತಕದಲ್ಲಿ ಈ ಮುಂಚೆ ಕಂಡು ಬಂದ ಮುಖ್ಯವಾದ ಆಲೋಚನೆಗಳನ್ನು ಪುನರಾವರ್ತಿಸುತ್ತವೆ - ನಾವು ನೆನಪಿನಲ್ಲಿಟ್ಟಿಕೊಳ್ಳಬೇಕೆಂದು ಕರ್ತನು ಬಯಸುವಂತಹ ಸತ್ಯಗಳು.

## ನದಿ ಹಾಗೂ ಜೀವವೃಕ್ಷ (22:1-5)

**1ಆಮೇಲೆ ಅವನು ಸ್ಫಟಿಕದಂತೆ ಪ್ರಕಾಶಮಾನವಾಗಿದ್ದ ಜೀವಜಲದ ನದಿಯನ್ನು ನನಗೆ ತೋರಿಸಿದನು. ಅದು ದೇವರ ಮತ್ತು ಯಜ್ಞದ ಕುರಿಯಾದಾತನ ಸಿಂಹಾಸನದಿಂದ ಹೊರಟು**

**ಪಟ್ಟಣದ ಬೀದಿಯ ಮಧ್ಯದಲ್ಲಿ ಹರಿಯುತ್ತಿತ್ತು. [2]ಆ ನದಿಯ ಉಭಯ ಪಾರ್ಶ್ವಗಳಲ್ಲಿ ಜೀವವೃಕ್ಷವಿತ್ತು; ಅದು ತಿಂಗಳು ತಿಂಗಳಿಗೆ ಫಲವನ್ನು ಫಲಿಸುತ್ತಾ ಹನ್ನೆರಡು ತರದ ಫಲಗಳನ್ನು ಕೊಡುತ್ತದೆ. ಆ ಮರದ ಎಲೆಗಳು ಜನಾಂಗದವರನ್ನು ವಾಸಿಮಾಡುವದಕ್ಕೆ ಪ್ರಯೋಜನವಾಗಿವೆ. [3]ಇನ್ನು ಶಾಪಗ್ರಸ್ತವಾದದ್ದು ಒಂದೂ ಇರುವದಿಲ್ಲ. ಆ ಪಟ್ಟಣದಲ್ಲಿ ದೇವರ ಮತ್ತು ಯಜ್ಞದ ಕುರಿಯಾದಾತನ ಸಿಂಹಾಸನವಿರುವದು. [4]ಆತನ ದಾಸರು ಆತನಿಗೆ ಯಾಜಕಸೇವೆ ಮಾಡುವರು; ಅವರಿಗೆ ಆತನ ಮುಖದರ್ಶನವಾಗುವದು; ಅವರ ಹಣೆಗಳ ಮೇಲೆ ಆತನ ಹೆಸರು ಇರುವದು. [5]ಇನ್ನು ರಾತ್ರಿ ಇರುವದಿಲ್ಲ; ಅವರಿಗೆ ದೀಪದ ಬೆಳಕೂ ಸೂರ್ಯನ ಬೆಳಕೂ ಬೇಕಾಗುವದಿಲ್ಲ; ದೇವರಾದ ಕರ್ತನೇ ಅವರಿಗೆ ಬೆಳಕನ್ನು ಕೊಡುವನು; ಅವರು ಯುಗಯುಗಾಂತರಗಳಲ್ಲಿಯೂ ಆಳುವರು.**

ಇಲ್ಲಿಯ ತನಕ, ಯೋಹಾನನಿಗೆ ಪಟ್ಟಣವನ್ನು ದೂರದಿಂದ ನೋಡುವದಕ್ಕೆ ಅವಕಾಶವು ಕೊಡಲ್ಪಟ್ಟಿತ್ತು. 22:1-5ರಲ್ಲಿ, ದೇವರು ತನ್ನ ಮಕ್ಕಳಿಗಾಗಿ ಏನನ್ನು ಸಿದ್ಧಮಾಡಿ ಇಟ್ಟಿದ್ದಾನೆಂಬುದನ್ನು ಕುರಿತು ಒಂದು ಮಿನುಗು ನೋಟವನ್ನು ಪಡೆಯಲು ಯೋಹಾನನನ್ನು ಒಳಗೆ ಆಮಂತ್ರಿಸಲಾಯಿತೆಂಬುದು ಸ್ಪಷ್ಟವಾಗಿರುತ್ತದೆ. ಪಟ್ಟಣದ ಗಾತ್ರವು (21:16) ಅಲ್ಲಿ ಅನೇಕ ನಿವಾಸಿಗಳಿದ್ದರೆಂಬುದನ್ನು ಸೂಚಿಸುತ್ತದೆ - ಅಗತ್ಯತೆಗಳನ್ನು ಹೊಂದಿದ್ದ ನಿವಾಸಿಗಳು - ಮತ್ತು ದೇವರು ಅವರ ಸಕಲ ಅಗತ್ಯತೆಯನ್ನು ಪೂರೈಸಿದ್ದನು. "ಜೀವವು ಪೋಷಿಸಲ್ಪಡಬೇಕಾದರೆ ಮೂರು ಮೂಲಭೂತ ಸಂಗತಿಗಳು ಅವಶ್ಯಕವಾಗಿರುತ್ತವೆ: ನೀರು, ಆಹಾರ, ಮತ್ತು ಆರೋಗ್ಯ."[2] ಚಿತ್ರಣವು ಒಂದು ಪಟ್ಟಣದಿಂದ ಬದಲಾಗಿ "ದೇವರ ಪರದೈಸಿ"ನ (2:7) ಕಡೆಗೆ ಸಾಗುತ್ತಿರುವ ವೇಳೆ 22ನೇ ಅಧ್ಯಾಯದ ಮೊದಲ ವಚನಗಳು ಈ ಮೂರು ಅಗತ್ಯತೆಗಳನ್ನು ಒದಗಿಸುವನು ಎಂಬುದಾಗಿ ಹೇಳುತ್ತವೆ.

**ವಚನ 1.** ದೇವದೂತನು ಮೊದಲನೆಯದಾಗಿ ಯೋಹಾನನಿಗೆ **ಸ್ಫಟಿಕದಂತೆ ಪ್ರಕಾಶಮಾನವಾಗಿದ್ದ ಜೀವಜಲದ ನದಿಯನ್ನು ನನಗೆ ತೋರಿಸಿದನು. ಅದು ದೇವರ ಮತ್ತು ಯಜ್ಞದ ಕುರಿಯಾದಾತನ ಸಿಂಹಾಸನದಿಂದ ಹೊರಟು** ಇತ್ತು. ಮನುಷ್ಯರು ತಾವು ಎಂದಿಗೂ ವೃದ್ಧರಾಗದಂತೆ ಇರುವದಕ್ಕೋಸ್ಕರ ಪುರಾಣಪ್ರಸಿದ್ಧ "ಯೌವನದ ಚಿಲುಮೆ"ಗಾಗಿ ಜೀವಿತಕಾಲಗಳನ್ನೆಲ್ಲಾ ವ್ಯಯಿಸಿದ್ದಾರೆ, ಆದರೆ ಅವರು ಹುಡುಕುತ್ತಲೇ ಮರಣಿಸಿ ಹೋಗಿರುವರು. ಅವರು ಗ್ರಹಿಸಿಕೊಳ್ಳಲು ವಿಫಲರಾಗಿದ್ದೇನೆಂದರೆ ಆ ಕೈಗೆ ಸಿಕ್ಕದಂಥ "ಚಿಲುಮೆ"ಯು ಭೂಮಿಯ ಮೇಲೆ ಇಲ್ಲ, ಆದರೆ ಪರಲೋಕದಲ್ಲಿದೆ ಎಂಬುದೆ; ಅದು ಜೀವದ ಉಗಮಸ್ಥಾನವಾಗಿರುವ ಸಿಂಹಾಸನದಿಂದ ಹೊರಟು ಹರಿಯುತ್ತದೆ. ಪ್ರಕಟನೆ 22ನೇ ಅಧ್ಯಾಯವು ಮಾತ್ರವೇ ಈ ಪುಸ್ತಕದಲ್ಲಿ **ದೇವರ ಮತ್ತು ಯಜ್ಞದ ಕುರಿಯಾದಾತನ ಸಿಂಹಾಸನ** ಎಂಬ ಪದಗುಚ್ಛವು ಸಿಕ್ಕುವ ಅಧ್ಯಾಯವಾಗಿದೆ (ವಚನಗಳು 1, 3; ಒತ್ತಿ ಹೇಳಿದ್ದು ನನ್ನದು), ಆದರೆ *ಇಬ್ಬರೂ* ಅಧಿಕಾರದ ಸ್ಥಾನವಾದ ಸಿಂಹಾಸನದ ಮೇಲೆ ಕೂತಿರುವರು ಎಂಬ ವಿಚಾರವು ಈ ಮುಂಚೆ ಹಲವಾರು ಸಾರಿ ಪ್ರಸ್ತಾಪಿಸಲ್ಪಟ್ಟಿರುತ್ತದೆ (3:21; 12:5).

**ವಚನ 2.** ಯೋಹಾನನು ಜೀವಜಲದ ನದಿಯನ್ನು **ಪಟ್ಟಣದ ಬೀದಿಯ ಮಧ್ಯದಲ್ಲಿ ಹರಿಯುತ್ತಿತ್ತು. ಆ ನದಿಯ ಉಭಯ ಪಾರ್ಶ್ವಗಳಲ್ಲಿ ಜೀವವೃಕ್ಷವಿತ್ತು; ಅದು ತಿಂಗಳು ತಿಂಗಳಿಗೆ ಫಲವನ್ನು ಫಲಿಸುತ್ತಾ ಹನ್ನೆರಡು ತರದ ಫಲಗಳನ್ನು ಕೊಡುತ್ತದೆ. ಆ ಮರದ ಎಲೆಗಳು ಜನಾಂಗದವರನ್ನು ವಾಸಿಮಾಡುವದಕ್ಕೆ ಪ್ರಯೋಜನವಾಗಿವೆ** ಎಂಬುದಾಗಿ ಕಾಣುತ್ತಾನೆ. ಗ್ರೀಕ್ ವಾಕ್ಯವು ಬೀದಿಯ, ನದಿ, ಮತ್ತು ವೃಕ್ಷ ಇವುಗಳ ಸಂಬಂಧಿತ ಸ್ಥಾನಗಳ ಕುರಿತಾಗಿ ಸ್ಪಷ್ಟವಾಗಿ ತಿಳಿಸುವದಿಲ್ಲ. ಕೆಲವರು ಹೇಗೆ ಜೀವವೃಕ್ಷವು (ಏಕವಚನ) **ನದಿಯ ಉಭಯಪಾರ್ಶ್ವಗಳಲ್ಲಿ**

ಇರುವದಕ್ಕೆ ಸಾಧ್ಯವಿರುತ್ತದೆ (ನೋಡಿರಿ ಕೀರ್ತನೆ 46:4; ಯೆಹೆಜ್ಕೇಲ 47:1-12; ಯೋವೇಲ 3:18; ಜೆಕರ್ಯ 14:8). ಕೆಲವರು ಅಭಿಪ್ರಾಯ ಪಡುವದೇನೆಂದರೆ ಸ್ವಲ್ಪಮಟ್ಟಿಗೆ ವ್ಯಾಪಕವಾದ ಕಾಡು ಬೆಳೆದು *ಒಂದು* ಮರದ ಬೇರುಗಳನ್ನು ವಿಸ್ತಾರವಾಗಿ ಹರಡಿಕೊಳ್ಳುವಂತೆ ಮಾಡಿತ್ತು ಎಂಬದೆ. ಆ ರೀತಿಯಾಗಿ ಇದ್ದಲ್ಲಿ, ನಾವು ಒಂದೇ ಬೇರುಗಳ ವ್ಯವಸ್ಥೆಯಲ್ಲಿನ ಅನೇಕ "ಮರಗಳ" ಬಗ್ಗೆ ಯೋಚಿಸಬಹುದು. ಖಂಡಿತವಾಗಿಯೂ, ವಾಚಕನು *ಸಾಂಕೇತಿಕ* ಭಾಷೆಯಲ್ಲಿ ಕಂಡು ಬರುವಂಥ ಅಸಾಮಂಜಸ್ಯತೆಗಳ ಬಗ್ಗೆ ಚಿಂತಿಸಬೇಕಾಗಿಲ್ಲ. ವಾಕ್ಯಭಾಗದ ಉದ್ದೇಶವು ಪಟ್ಟಣದ ಯೋಜನೆಯನ್ನು ಹೇಗೆ ಮಾಡಬೇಕೆಂಬ ಕುರಿತಾದ ಪಾಠವಾಗಿರಬೇಕೆಂಬುದಲ್ಲ, ಆದರೆ ದೇವರ ಒದಗಿಸುವಿಕೆಯ ಕುರಿತು ಭರವಸವೊಂದನ್ನು ಕೊಡುವದೇ ಆಗಿರುತ್ತದೆ.

**ಜೀವವೃಕ್ಷ** ಪಾಪದ ನಿಮಿತ್ತವಾಗಿ ಮಾನವರಿಗೆ ಸಿಕ್ಕದೆ ಕಳೆದು ಹೋಗಿತ್ತು (ಆದಿಕಾಂಡ 2:9; 3:6, 22-24), ಮತ್ತು ಮಾನವರ ಮೇಲೆ ಒಂದು ಶಾಪವು ನೆಲೆಗೊಳಿಸಲ್ಪಟ್ಟಿತ್ತು (ಆದಿಕಾಂಡ 3:16-19). ಹೇಗೂ, ಪರಲೋಕದಲ್ಲಿ, "ಇನ್ನು ಶಾಪಗ್ರಸ್ತವಾದದ್ದು ಒಂದೂ ಇರುವದಿಲ್ಲ" (ಪ್ರಕಟನೆ 22:3), ಮತ್ತು ಜೀವವೃಕ್ಷವು ಪುನಃ ಸ್ಥಾಪಿಸಲ್ಪಡುವದು (ನೋಡಿರಿ 2:7; 22:14, 19). ವೃಕ್ಷವು **ಹನ್ನೆರಡು ತರದ ಫಲಗಳನ್ನು ಕೊಡುತ್ತದೆ** - ಅಥವಾ "ಫಲದ ಬೆಳೆಗಳನ್ನು" ಕೊಡುತ್ತದೆ (NASBಯಲ್ಲಿನ ಬದಿಯ ಟಿಪ್ಪಣಿ). ಇಲ್ಲಿ ವಿವಿಧ ಫಲಗಳ ಬದಲಾಗಿ ನಿರಂತರವಾಗಿ ಫಲ ಕೊಡುವಿಕೆಯ ಮೇಲೆ ಒತ್ತು ಇರಬಹುದಾಗಿದೆ. ಎರಡರಲ್ಲಿ ಯಾವ ವಿಧದಲ್ಲಿದ್ದರೂ ಸರಿಯೇ, ಪರಲೋಕದಲ್ಲಿ, *ದೇವರು ನಮಗೆ ಅಗತ್ಯವಿರುವ ಎಲ್ಲವನ್ನೂ ಒದಗಿಸುವನು* ಎಂಬುದನ್ನು ಈ ವಾಕ್ಯಭಾಗವು ತಿಳಿಸುತ್ತದೆ.

ವೃಕ್ಷದ ಪ್ರತಿಯೊಂದು ಭಾಗವು ಪಟ್ಟಣದ ನಾಗರೀಕರಿಗೆ ಒಂದು ಆಶೀರ್ವಾದವನ್ನು ಒದಗಿಸುವದಾಗಿತ್ತು. ಅದರ ರಸಭರಿತ ಹಣ್ಣುಗಳು ಅವರ ಹಸಿವೆಯನ್ನು ತೃಪ್ತಿಪಡಿಸುತ್ತಿತ್ತು, ಮತ್ತು **ಆ ಮರದ ಎಲೆಗಳು ಜನಾಂಗದವರನ್ನು ವಾಸಿಮಾಡುವದಕ್ಕೆ ಪ್ರಯೋಜನವಾಗಿವೆ.** ಕ್ರೈಸ್ತರು ಪರಲೋಕದಲ್ಲಿ ಯಾವ ಅರ್ಥದಲ್ಲಿ "ವಾಸಿಮಾಡಲ್ಪಡುವರು"? ಪಾಪವು ಶಾಪವನ್ನುಂಟು ಮಾಡುತ್ತದಾದ್ದರಿಂದ, ಪಾಪವನ್ನ ನಿರ್ಮೂಲನೆ ಮಾಡುವದರಿಂದ ಅದೇ ಒಂದು "ವಾಸಿಮಾಡುವಿಕೆ" ಆಗಿರುತ್ತದಷ್ಟೆ. ಕೆಲವು ಲೇಖಕರು *ಕ್ರೈಸ್ತನ* "ಜೀವವೃಕ್ಷ"ವನ್ನು ಯೇಸುವಿನ *ಶಿಲುಬೆ*ಗೆ ಸಂಬಂಧಗೊಳಿಸುತ್ತಾರೆ. "ವೃಕ್ಷ" ಎಂಬುದನ್ನು ಅನುವಾದಿಸಿರುವ ξύλον (*xulon*) ಎಂಬ ಪದವು, ಹೊಸ ಒಡಂಬಡಿಕೆಯಲ್ಲಿ ಶಿಲುಬೆಯನ್ನು ಸೂಚಿಸುವದಕ್ಕೆ ಆಗಾಗ ಬಳಸಲ್ಪಟ್ಟಿರುತ್ತದೆ. (NASB ಮತ್ತು KJVಯಲ್ಲಿರುವ ಅಪೊಸ್ತಲರ ಕೃತ್ಯಗಳು 5:30; 10:39; 13:29; 1 ಪೇತ್ರ 2:24 ವಾಕ್ಯಭಾಗಗಳನ್ನು ಹೋಲಿಕೆ ಮಾಡಿರಿ.) ಯೇಸುವಿನ ಯಜ್ಞದ ಮೂಲಕವಾಗಿ, ಕ್ರೈಸ್ತರು ಆತ್ಮೀಕವಾಗಿ ವಾಸಿಮಾಡಲ್ಪಟ್ಟಿದ್ದಾರೆ (ನೋಡಿರಿ ಯೆಶಾಯ 53:5). ಇಂದು ದೈಹಿಕ ಮತ್ತು ಮಾನಸಿಕ ವೇದನೆಗಳಿಂದ ವಾಸಿಯಾಗಬೇಕೆಂದು ಹಂಬಲಿಸುವವರನ್ನೆಲ್ಲಾ ಪರಿಗಣಿಸುವದಾದರೆ, ಬಹುಶಃ "ಜನಾಂಗದವರನ್ನು ವಾಸಿಮಾಡುವದಕ್ಕೆ ಪ್ರಯೋಜನವಾಗಿವೆ" ಎಂಬದು, ಪರಲೋಕದಲ್ಲಿ ಕೊನೆಗೂ ಜನರು ದೇಹ, ಮನಸ್ಸು, ಮತ್ತು ಆತ್ಮಗಳಲ್ಲಿ ಗುಣಪಡಿಸಲ್ಪಡುವರೆಂಬ ಒಂದು ವಾಗ್ದಾನ ಸಹ ಆಗಿರುತ್ತದೆ. ನಾವು ಈ ವಾಸ್ತವಾಂಶದ ಕುರಿತು ನಿಶ್ಚಯತೆಯಿಂದಿರಬಹುದಾಗಿದೆ: ಪರಲೋಕದಲ್ಲಿ, ನಾವು ಯಾವಾಗಲೂ ಉತ್ತಮ ಆರೋಗ್ಯವನ್ನು ಅನುಭವಿಸುವೆವು.

**ವಚನ 3.** ಆದಿಕಾಂಡ 3ನೇ ಅಧ್ಯಾಯದಲ್ಲಿನ ಶಾಪವು ಪರಿಶ್ರಮ ಹಾಗೂ ಕಣ್ಣೀರನ್ನು ಉಂಟು ಮಾಡಿತ್ತು (ಆದಿಕಾಂಡ 3:16-19), ಆದರೆ ಶಾಪದ ಅತ್ಯಂಥ ಭಯಂಕರವಾದ ಭಾಗವೆಂದರೆ ಅದು ದೇವರಿಂದ ಮನುಷ್ಯನು ಅಗಲಿಸಲ್ಪಟ್ಟದ್ದೇ (ಆದಿಕಾಂಡ 3:23, 24;

ನೋಡಿರಿ ಯೆಶಾಯ 59:2). ಇನ್ನು ಮೇಲೆ ಕರ್ತನು ತೋಟದಲ್ಲಿದ್ದ ನಿಕಟವಾದ ಅನ್ಯೋನ್ಯತೆಯಲ್ಲಿ ಮನುಷ್ಯನೊಂದಿಗೆ "ಸಂಚರಿಸಲಿಲ್ಲ" (ನೋಡಿರಿ ಆದಿಕಾಂಡ 3:8). ಪರಲೋಕದಲ್ಲಿ ಕೊನೆಗೂ ಆ ಶಾಪವು ರದ್ದುಗೊಳಿಸಲ್ಪಡುವದು: **ಇನ್ನು ಶಾಪಗ್ರಸ್ತವಾದದ್ದು ಒಂದೂ ಇರುವದಿಲ್ಲ. ಆ ಪಟ್ಟಣದಲ್ಲಿ ದೇವರ ಮತ್ತು ಯಜ್ಞದ ಕುರಿಯಾದಾತನ ಸಿಂಹಾಸನವಿರುವದು.** (22:3ನ್ನು ಜೆಕರ್ಯ 14:11ರೊಂದಿಗೆ ಹೋಲಿಕೆ ಮಾಡಿರಿ.)

ಒಬ್ಬನು 3ನೇ ವಚನದಲ್ಲಿರುವ ಇನ್ನೊಂದು ಪದಗುಚ್ಛವನ್ನು ನಿರ್ಲಕ್ಷ್ಯಿಸಲು ಬಯಸುವದಿಲ್ಲ: **ಆತನ ದಾಸರು ಆತನಿಗೆ ಯಾಜಕಸೇವೆ ಮಾಡುವರು.** ಪ್ರಕಟನೆ ಪುಸ್ತಕವು ಪರಲೋಕವನ್ನು ಅರ್ಥಗರ್ಭಿತವಾದ ಚಟುವಟಿಕೆ ಇರುವಂಥ ಒಂದು ಸ್ಥಳವೆಂಬುದಾಗಿ ಚಿತ್ರಿಸುತ್ತದೆ. **ಯಾಜಕಸೇವೆ** ಎಂಬುದನ್ನು ಅನುವಾದಿಸಿರುವ λατρεύω (*latreuō*) ಎಂಬ ಪದವು, "ಧಾರ್ಮಿಕ ಸೇವೆ" ಎಂಬ ಅರ್ಥವನ್ನು ಸಹ ಕೊಡಬಲ್ಲದಾದ್ದರಿಂದ, ಕೆಲವು ತರ್ಜುಮೆಗಳಲ್ಲಿ "ಆತನನ್ನು ಆರಾಧಿಸುವರು" ಎಂದಿರುತ್ತದೆ (7:15ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ದೇವರನ್ನು ಸ್ತುತಿಸುವದನ್ನು ಹೊರತು ಪಡಿಸಿ, ದೇವಜನರಿಗೆ ಏನನ್ನು ಮಾಡುವಂತೆ ಕರೆಯಲಾಗುತ್ತದೋ ನಿಖರವಾಗಿ ತಿಳಿದು ಬರುವದಿಲ್ಲ. ಆಗಲೂ, ಅವರ ಅಸ್ತಿತ್ವಕ್ಕೆ ಒಂದು ಉದ್ದೇಶವಿರುವದು ಎಂಬ ಭರವಸವನ್ನು ಕ್ರೈಸ್ತರಿಗೆ ವಾಕ್ಯಭಾಗವು ನೀಡುತ್ತದೆ.

**ವಚನ 4.** ಪಟ್ಟಣದ ನಿವಾಸಿಗಳಿಗೆ **ಆತನ ಮುಖ ದರ್ಶನವಾಗುವದು**. ಭೂಮಿಯ ಮೇಲೆ, ದೇವರ ಮುಖವನ್ನು ನೋಡುವದಕ್ಕೆ ಯಾರೊಬ್ಬನಿಗೂ ಅನುಮತಿಯಿರುವದಿಲ್ಲ (ವಿಮೋಚನಕಾಂಡ 33:20, 23), ಆದರೆ ಒಂದು ದಿನ "ನಿರ್ಮಲಚಿತ್ತರು" "ದೇವರನ್ನು ನೋಡುವರು" (ಮತ್ತಾಯ 5:8). ಇಬ್ರಿಯ ಕ್ರೈಸ್ತರಿಗೆ ಬರೆದ ಲೇಖಕನು ದೇವರನ್ನು ನೋಡಿದ ಕುರಿತು ಮಾತಾಡಿದನು (ಇಬ್ರಿಯ 12:14). ಮೀನುಗಳು ನೀರಿನಲ್ಲಿ ಜೀವಿಸುವಂತೆ ಸೃಷ್ಟಿಸಲ್ಪಟ್ಟಿರುವ ಪ್ರಕಾರವೇ, ಪಕ್ಷಿಗಳು ಆಕಾಶದಲ್ಲಿ ಹಾರಾಡುವದಕ್ಕೆ ಸೃಷ್ಟಿಸಲ್ಪಟ್ಟಿರುವಂತೆಯೇ, ನಮ್ಮ ಅತ್ಮಗಳು ದೇವರ ಪ್ರಸನ್ನತೆಯಲ್ಲಿ ಜೀವಿಸುವಂತೆ ಹಾಗೂ ಅಭಿವೃದ್ಧಿಗೊಳ್ಳುವಂತೆ ಸೃಷ್ಟಿಸಲ್ಪಟ್ಟಿವೆ. ಈ ಅನ್ಯೋನ್ಯತೆಯು ಪರಲೋಕದಲ್ಲಿ ಸಿಕ್ಕುವ ಅತ್ಯಂಥ ಶ್ರೇಷ್ಠವಾದ ಆಶೀರ್ವಾದವಾಗಿದೆ. "ದೇವರೊಂದಿಗೆ ಮತ್ತು ಆತನ ಮಗನೊಂದಿಗೆ ಜೀವಿಸುವದೇ ಪರಲೋಕದ ತಿರುಳು ಆಗಿರುತ್ತದೆ."[3]

ಈ ವಿವರವು ಸೇರ್ಪಡೆಗೊಳಿಸಲ್ಪಟ್ಟದ್ದಾಗಿದೆ: **ಅವರ ಹಣೆಗಳ ಮೇಲೆ ಆತನ ಹೆಸರು ಇರುವದು.** ಈ ಗುರುತನ್ನು ಹೊಂದಿರುವದು *ಯಜಮಾನತ್ವ*ವನ್ನು ಸೂಚಿಸುತ್ತದೆ; ಕ್ರೈಸ್ತರು ಕರ್ತನಿಗೆ ಸ್ವಂತವಾದವರು (ನೋಡಿರಿ 3:12; 7:3). ಅಷ್ಟುಮಾತ್ರವಲ್ಲದೆ, ಅದು *ಸಾರೂಪ್ಯ*ವನ್ನು ಸೂಚಿಸುತ್ತದೆ: ದೇವರ ಹೆಸರು ಆತನು ಯಾರು ಎಂಬುದನ್ನು ಸೂಚಿಸುತ್ತದೆ, ಮತ್ತು ಮನುಷ್ಯನ ಹಣೆಯು ಆತನ ಹೆಸರಿನಿಂದ ಆವರಿಸಲ್ಪಟ್ಟಿರುತ್ತದೆ. ಆದದರಿಂದ, ಹಣೆಯ ಮೇಲೆ ದೇವರ ಹೆಸರನ್ನು ಹೊಂದಿರುವದು ಮನುಷ್ಯನ ಮನಸ್ಸಿನ ಮೇಲೆ ದೇವರ ಗುಣಸ್ವಭಾವವು ಪರಿಣಾಮವನ್ನು ಬೀರಿರುತ್ತದೆ ಮತ್ತು ಆ ಮೂಲಕ ಇಡೀ ವ್ಯಕ್ತಿಯ ಮೇಲೆ ಪರಿಣಾಮ ಹೊಂದಿರುವದು. ಕರ್ತನ ಪ್ರಸನ್ನತೆಯಲ್ಲಿ, ಕ್ರೈಸ್ತರು ಹೆಚ್ಚೆಚ್ಚಾಗಿ ಆತನ ಸಾರೂಪ್ಯವುಳ್ಳವರಾಗುತ್ತಾ ಹೋಗುವರು. ಯೋಹಾನನು ಈ ಸತ್ಯವನ್ನು ತನ್ನ ಪತ್ರಿಕೆಗಳನ್ನು ವ್ಯಕ್ತಪಡಿಸುತ್ತಾನೆ: "ಪ್ರಿಯರೇ, ಈಗ ದೇವರ ಮಕ್ಕಳಾಗಿದ್ದೇವೆ; ಮುಂದೆ ನಾವು ಏನಾಗುವೆವೋ ಅದು ಇನ್ನು ಪ್ರತ್ಯಕ್ಷವಾಗಲಿಲ್ಲ. ಕ್ರಿಸ್ತನು ಪ್ರತ್ಯಕ್ಷನಾದರೆ ನಾವು ಆತನ ಹಾಗಿರುವೆವೆಂದು ಬಲ್ಲೆವು" (1 ಯೋಹಾನ 3:2). 2 ಕೊರಿಂಥ 3:18ರ ಪ್ರಕಾರವಾಗಿ, ಆ

ರೂಪಾಂತರವು ಈ ಜೀವಿತದಲ್ಲಿಯೇ ಆರಂಭಗೊಳ್ಳುತ್ತದೆ. ಅದು ಮುಂದಿನ ಜೀವಿತದಲ್ಲಿ ಸಂಪೂರ್ಣಗೊಳ್ಳುವದು.

**ವಚನ 5.** ಪರಲೋಕದ ಕುರಿತಾದ ರೋಮಾಂಚಕಾರಿಯಾದ ಹಾಗೂ ದೀನವಾದ ಚಿತ್ರಣವು ಕರ್ತನು ಪರಲೋಕದ ಬೆಳಕಾಗಿರುವನು ಎಂಬ, ಜೊತೆಗೆ ಇನ್ನೊಂದು ವಾಗ್ದಾನವನ್ನು ನೀಡುತ್ತಾ ಎರಡು ದಢೀಕರಣಗಳೊಂದಿಗೆ ಮುಕ್ತಾಯಗೊಳ್ಳುತ್ತದೆ. ಮೊದಲನೆಯದಾಗಿ, **ಇನ್ನು ರಾತ್ರಿ ಇರುವದಿಲ್ಲ** ಎಂಬುದಾಗಿ ವಾಚಕನಿಗೆ ತಿಳಿಸಲಾಗುತ್ತದೆ. ಬಹಳಷ್ಟು ಜನರಿಗಾದರೋ, ರಾತ್ರಿಯಲ್ಲಿ ಎಲ್ಲವೂ ಅತಿ ಘೋರವಾಗಿ ತೋರುತ್ತದೆ. ಅಂಧಕಾರದಲ್ಲಿ, ಒಬ್ಬ ವ್ಯಕ್ತಿಯ ಪ್ರತಿರೋಧ ಶಕ್ತಿಯು ಕಡಿಮೆಯಾಗಿರುತ್ತದೆ ಮತ್ತು ನೋವು ತೀಕ್ಷ್ಣಗೊಳಿಸಲ್ಪಡುತ್ತದೆ. ದೇವರಿಗೆ ಸ್ತೋತ್ರವಾಗಲಿ, "ರಾತ್ರಿಯಂತೂ ಅಲ್ಲಿಲ್ಲ" (21:25). ಬಳಿಕ ಪರಲೋಕದ ಪಟ್ಟಣದಲ್ಲಿ ಜೀವಿಸುವವರಿಗೆ **ದೀಪದ ಬೆಳಕೂ ಸೂರ್ಯನ ಬೆಳಕೂ ಬೇಕಾಗುವದಿಲ್ಲ; ದೇವರಾದ ಕರ್ತನೇ ಅವರಿಗೆ ಬೆಳಕನ್ನು ಕೊಡುವನು** ಎಂದು ಜ್ಞಾಪಿಸಲಾಗುತ್ತದೆ (ನೋಡಿರಿ ಯೋಹಾನ 1:4-9; 8:12; 12:35, 36; 1 ಯೋಹಾನ 1:5-7).

ಅಂತಿಮವಾಗಿ, ಪರಲೋಕಕ್ಕೆ ಹೋಗುವವರು **ಯುಗಯುಗಾಂತರಗಳಲ್ಲಿಯೂ ಆಳುವರು** ಎಂಬುದಾಗಿ ವಾಚಕನಿಗೆ ಹೇಳಲ್ಪಡುತ್ತದೆ. ಪ್ರಕಟನೆ ಪುಸ್ತಕದಲ್ಲಿ ಈ ಮುಂಚೆ, ಕ್ರೈಸ್ತರು ಈಗ ಸದ್ಯ ಕರ್ತನ ಸಂಗಡ ಆಳ್ವಿಕೆ ಮಾಡುತ್ತಿದ್ದಾರೆಂದು (1:5, 6; 5:10ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ), ಮತ್ತು ರಕ್ತಸಾಕ್ಷಿಗಳು ಮರಣಿಸಿದ ನಂತರವೂ ಯೇಸುವಿನ ಸಂಗಡ ಆಳ್ವಿಕೆ ಮಾಡುವದನ್ನು ಮುಂದುವರೆಸುತ್ತಾರೆಂದು (20:6) ನೋಡಲಾಯಿತು. ಈಗ, ಕ್ರೈಸ್ತರಿಗೆ ಆತನ ಸಂಗಡದ ಅವರ ಆಳ್ವಿಕೆಯು ನಿತ್ಯಕ್ಕೂ ಸಾಗುವದೆಂದು ಹೇಳಲಾಗುತ್ತದೆ. ಕ್ರೈಸ್ತರು ಬೇರೆಯವರ *ಮೇಲೆ* ಆಳ್ವಿಕೆ ಮಾಡುವವರೆಂಬುದಕ್ಕೆ ವಾಕ್ಯಭಾಗದಲ್ಲಿ ಯಾವದೇ ಸೂಚನೆಗಳಿರುವದಿಲ್ಲ; ಪರಿಭಾಷೆಯು ಅವರು ರಾಜವಂಶಸ್ಥ ಕುಟುಂಬದ ಭಾಗವಾಗಿ ಉಳಿದುಕೊಳ್ಳುವರು ಎಂಬುದನ್ನು ಪುನರದೃಢೀಕರಿಸುತ್ತದಷ್ಟೇ (20:6ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ನಾವು ಎಷ್ಟೊಂದು ಧನ್ಯರಾಗಿರಲಿದ್ದೇವೆ!

## ನಂಬತಕ್ಕವುಗಳೂ ಸತ್ಯವಾದವುಗಳೂ ಆಗಿರುವ ಮಾತುಗಳು (22:6, 7)

**[6]ಆಮೇಲೆ ಅವನು ನನಗೆ - ಈ ಮಾತುಗಳು ನಂಬತಕ್ಕವುಗಳೂ ಸತ್ಯವಾದವುಗಳೂ ಆಗಿವೆ; ಪ್ರವಾದಿಗಳ ಆತ್ಮಗಳನ್ನು ಪ್ರೇರೇಪಿಸುವ ದೇವರಾದ ಕರ್ತನು ಬೇಗನೆ ಸಂಭವಿಸಬೇಕಾಗಿರುವ ಸಂಗತಿಗಳನ್ನು ತನ್ನ ದಾಸರಿಗೆ ತಿಳಿಯಪಡಿಸುವದಕ್ಕಾಗಿ ತನ್ನ ದೂತನನ್ನು ಕಳುಹಿಸಿಕೊಟ್ಟನು. [7]ಇಗೋ, ಬೇಗನೆ ಬರುತ್ತೇನೆ. ಈ ಪುಸ್ತಕದಲ್ಲಿ ಬರೆದಿರುವ ಪ್ರವಾದನೆಯ ಮಾತುಗಳನ್ನು ಕೈಕೊಂಡು ನಡೆಯುವವನು ಧನ್ಯನು ಎಂದು ಹೇಳಿದನು.**

**ವಚನ 6.** ಈ ಕ್ಲುಪ್ತವಾದ ವಿಭಾಗವು ಯೋಹಾನನಿಗೆ ದೇವದೂತನು **ಈ ಮಾತುಗಳು ನಂಬತಕ್ಕವುಗಳೂ ಸತ್ಯವಾದವುಗಳೂ ಆಗಿವೆ** ಎಂದು ಹೇಳುವದರೊಂದಿಗೆ ಆರಂಭಗೊಳ್ಳುತ್ತದೆ. ಯೇಸುವು ಈಗಾಗಲೇ "ನಂಬತಕ್ಕ ಸತ್ಯಸಾಕ್ಷಿ" ಎಂಬ ಗುಣಸ್ವಭಾವವುಳ್ಳವನೆಂದು ಹೇಳಲಾಗಿರುತ್ತದೆ (3:14; 19:11); ಆತನ ಮಾತುಗಳು ಈ ಗುಣಸ್ವಭಾವದಲ್ಲಿ ಪಾಲುಗಾರಿಕೆ ಹೊಂದಿರುವದು ಸಹಜವೇ ಆಗಿರುತ್ತದೆ. ಈ ಹೇಳಿಕೆಯು 21 ಮತ್ತು 22 ಅಧ್ಯಾಯಗಳಲ್ಲಿ ಪರಲೋಕದ ಕುರಿತಾಗಿರುವ "ಮಾತುಗಳಿಗೆ" ವಿಶೇಷ

ಅನ್ವಯಿಕೆಯನ್ನು ಹೊಂದಿವೆ. ಇದು ಇಡೀ ಪ್ರಕಟನೆ ಪುಸ್ತಕದ ಕುರಿತಾಗಿ ಒಂದು ಸಾರಾಂಶದ ಹೇಳಿಕೆ ನೀಡುವ ಉದ್ದೇಶವನ್ನು ಸಹ ಹೊಂದಿರಬಹುದು. ಅಷ್ಟುಮಾತ್ರವಲ್ಲದೆ, ಇದು ಎಲ್ಲಾ ಶಾಸ್ತ್ರಗಳ ವಿಷಯದಲ್ಲಿ ಒಂದು ಘೋಷಣೆ ಆಗಿರಬಲ್ಲದು.

ಬೈಬಲ್ ಏಕೆ ವಿಶ್ವಾಸರ್ಹವಾಗಿರುತ್ತದೆ? ಇದಕ್ಕೆ ಉತ್ತರವು 6ನೇ ವಚನದಲ್ಲಿ ಸಿಕ್ಕುತ್ತದೆ: **ಪ್ರವಾದಿಗಳ ಆತ್ಮಗಳನ್ನು ಪ್ರೇರೇಪಿಸುವ ದೇವರಾದ ಕರ್ತನು**. ಬೈಬಲನ್ನು ಬರೆದ ವ್ಯಕ್ತಿಗಳು ತಮ್ಮ ಸ್ವಂತ ಆಲೋಚನೆಗಳನ್ನು, ವಿಚಾರಗಳನ್ನು, ಮತ್ತು ಮಾತುಗಳನ್ನು ಬರೆಯಲಿಲ್ಲ. ಬದಲಾಗಿ, ದೇವರು ಅವರ ಆತ್ಮಗಳನ್ನು ನಿಯಂತ್ರಣದಲ್ಲಿಟ್ಟುಕೊಂಡಿದ್ದನು. ಪೇತ್ರನು ಒತ್ತಿ ಹೇಳಿದ್ದೇನೆಂದರೆ "ಯಾವ ಪ್ರವಾದನೆಯೂ ಎಂದೂ ಮನುಷ್ಯರ ಚಿತ್ತದಿಂದ ಉಂಟಾಗಲಿಲ್ಲ; ಮನುಷ್ಯರು ಪವಿತ್ರಾತ್ಮ ಪ್ರೇರಿತರಾಗಿ ದೇವರಿಂದ ಹೊಂದಿದ್ದನ್ನೇ ಮಾತಾಡಿದರು" ಎಂಬದೆ (2 ಪೇತ್ರ 2:21).

ಪ್ರಕಟನೆ 22ನೇ ಅಧ್ಯಾಯದಲ್ಲಿನ ಅನೇಕ ಆಲೋಚನೆಗಳು ಪುಸ್ತಕದ ಆರಂಭಿಕ ಮಾತುಗಳನ್ನು ಪ್ರತಿಬಿಂಬಿಸುತ್ತವೆ. ಉದಾಹರಣೆಗೆ, 22:6ರಲ್ಲಿ ದೇವರು **ಬೇಗನೆ ಸಂಭವಿಸಬೇಕಾಗಿರುವ ಸಂಗತಿಗಳನ್ನು ತನ್ನ ದಾಸರಿಗೆ ತಿಳಿಯಪಡಿಸುವದಕ್ಕಾಗಿ** ತನ್ನ ದೂತನನ್ನು ಕಳುಹಿಸಿಕೊಟ್ಟನು. ಇದೇ ಮಾತುಗಳು ಅಂತ್ಯಕಾಲಿಕ ಪುಸ್ತಕದ ಆರಂಭದಲ್ಲಿ ಕಾಣಿಸಿಕೊಳ್ಳುತ್ತವೆ:

> ಯೇಸು ಕ್ರಿಸ್ತನ ಪ್ರಕಟನೆಯು. ಆತನು *ಬೇಗನೆ ಸಂಭವಿಸಬೇಕಾಗಿರುವ ಸಂಗತಿಗಳನ್ನು ತನ್ನ ದಾಸರಿಗೆ ತೋರಿಸುವದಕ್ಕಾಗಿ* ದೇವರಿಂದ ಈ ಪ್ರಕಟನೆಯನ್ನು ಹೊಂದಿದನು; ಇದಲ್ಲದೆ ಆತನು ತನ್ನ ದೂತನನ್ನು ಕಳುಹಿಸಿ ಅವನ ಮೂಲಕ ಆ ಸಂಗತಿಗಳನ್ನು ತನ್ನ ದಾಸನಾದ ಯೋಹಾನನಿಗೆ ಸೂಚಿಸಿದನು. ಯೋಹಾನನು ತಾನು ಕಂಡದ್ದನ್ನೆಲ್ಲಾ ತಿಳಿಸುವವನಾಗಿ ದೇವರ ವಾಕ್ಯದ ವಿಷಯವಾಗಿಯೂ ಯೇಸು ಕ್ರಿಸ್ತನು ಹೇಳಿದ ಸಾಕ್ಷಿಯ ವಿಷಯವಾಗಿಯೂ ಸಾಕ್ಷಿಕೊಟ್ಟನು (1:1, 2; ಒತ್ತಿ ಹೇಳಿದ್ದು ನನ್ನದು).

**ವಚನ 7. ಇಗೋ, ಬೇಗನೆ ಬರುತ್ತೇನೆ.** 1ನೇ ಅಧ್ಯಾಯದಲ್ಲಿ, ಯೋಹಾನನು ಯೇಸುವಿನ ವಿಷಯವಾಗಿ ಹೀಗೆ ಬರೆದನು, "ಇಗೋ ಮೇಘಗಳೊಂದಿಗೆ ಬರುತ್ತಾನೆ" (1:7). ಈ ಘಟನೆಯ ನಿಶ್ಚಯತೆಯು ಪ್ರಕಟನೆ ಪುಸ್ತಕದ ಕಡೇ ವಿಭಾಗದ ಮುಖ್ಯ ಯೋಚನೆಯಾಗಿರುತ್ತದೆ. ಯೇಸುವು "ಬೇಗನೆ ಬರುತ್ತಾನೆ" ಎಂಬ ವಾಸ್ತವಾಂಶವು 1ರಿಂದ 21 ಅಧ್ಯಾಯಗಳಲ್ಲಿ ಒಟ್ಟಾಗಿ ಹೇಳಿದಷ್ಟು ಸಾರಿಯೇ 22ನೇ ಅಧ್ಯಾಯದಲ್ಲಿ ಪ್ರಸ್ತಾಪಿಸಲ್ಪಟ್ಟಿದೆ. ಮೂರು ಸಾರಿ ಯೇಸುವು ಹೀಗೆ ಹೇಳಿದನು, "ನಾನು ಬೇಗನೆ ಬರುತ್ತೇನೆ": 7, 12, ಮತ್ತು 20.

ವ್ಯಾಖ್ಯಾನ ಗ್ರಂಥದಲ್ಲೆಲ್ಲಾ ಇರುವ ಪ್ರಕಾರವೇ, ತಾತ್ಕಾಲಿಕ "ಬರೋಣಗಳು" ಹಾಗೂ ಯುಗಾಂತ್ಯದಲ್ಲಿ ನಡೆಯುವ ಎರಡನೆಯ ಬರೋಣದ ನಡುವೆ ವ್ಯತ್ಯಾಸವನ್ನು ಗುರುತಿಸುವದು ಕಷ್ಟಕರವಾಗಿರುತ್ತದೆ. ರೋಮನ್ ಸಾಮ್ರಾಜ್ಯವನ್ನು ದಂಡಿಸುವದಕ್ಕಾಗಿ ಕರ್ತನು "ಬರುವಿಕೆ"ಯು ಪ್ರಥಮ ಶತಮಾನದ ಹಿಂಸೆಗೊಳಗಾದ ಕ್ರೈಸ್ತರ ಮನಸ್ಸುಗಳಲ್ಲಿ ಅತ್ಯಂಥ ಅಗ್ರಸ್ಥಾನದಲ್ಲಿತ್ತು. ಇಂದು ಜೀವಿಸುವವರಿಗಾದರೋ, ಈ ಉಲ್ಲೇಖಗಳು ಎಲ್ಲರಿಗೂ ಎರಡನೆಯ ಬರೋಣವು ಯಾವ ಕ್ಷಣದಲ್ಲಾದರೂ ಸಂಭವಿಸಬಹುದೆಂದಬುದನನ್ನು ಜ್ಞಾಪಿಸುತ್ತದೆ. ಎರಡು ವಿಧವಾದ "ಬರೋಣ"ಗಳು ಒಂದಾಗ ಬೆರೆತುಕೊಳ್ಳುತ್ತವೆ. J. W. Robertsನು ಬರೆದದ್ದೇನೆಂದರೆ "ತಾತ್ಕಾಲಿಕ ಘಟನೆಗಳನ್ನು ಅಂತಿಮ ಬರೋಣದ ಪದಗಳ ಪರಿಭಾಷೆಯಲ್ಲಿ ಬಣ್ಣಿಸಬಹುದಾಗಿದೆ ಯಾಕೆಂದರೆ ಅವುಗಳು ಆ ಘಟನೆಯನ್ನು ಎದುರುನೋಡುತ್ತವೆ."[4] ಕ್ರೈಸ್ತರು ಯಾವಾಗಲೂ ಸಿದ್ಧರಾಗಿರಬೇಕು ಎಂಬುದನ್ನು ಕ್ರೈಸ್ತರಿಗೆ

ತೋರಿಸಿ ಕೊಡುವದಕ್ಕಾಗಿ ದೇವರು ಈ ಜ್ಞಾಪಕಗಳನ್ನು ಒದಗಿಸಿದ್ದಾನೆ, ಯಾಕೆಂದರೆ ಯೇಸುವು ಬರುವ ದಿನವನ್ನಾಗಲಿ ಅಥವಾ ಗಳಿಗೆಯನ್ನಾಗಲಿ ಯಾರೂ ತಿಳಿಯರು (ಮತ್ತಾಯ 24:36).

ಪ್ರಕಟನೆ ಪುಸ್ತಕದ ಆರಂಭಿಕ ಮಾತುಗಳಲ್ಲಿ ಓದುವವರಿಗೆ ಮತ್ತು ಆಲಿಸುವವರಿಗೆ ಒಂದು ವಿಶೇಷ ಆಶೀರ್ವಾದವನ್ನು ಒಳಗೊಂಡಿದ್ದವು: "ಈ ಪ್ರವಾದನಾ ವಾಕ್ಯಗಳನ್ನು ಓದುವಂಥವನೂ ಕೇಳುವಂಥವರೂ ಈ ಪ್ರವಾದನೆಯಲ್ಲಿ ಬರೆದಿರುವ ಮಾತುಗಳನ್ನು ಕೈಕೊಂಡು ನಡೆಯುವಂಥವರೂ ಧನ್ಯರು" (1:3). ಅಂತಿಮ ಅಧ್ಯಾಯದಲ್ಲಿ, ಪ್ರಕಟನೆ ಪುಸ್ತಕವು ಅದೇ ರೀತಿಯ ಆಶೀರ್ವಾದವನ್ನು ಹೊಂದಿದೆ: **ಈ ಪುಸ್ತಕದಲ್ಲಿ ಬರೆದಿರುವ ಪ್ರವಾದನೆಯ ಮಾತುಗಳನ್ನು ಕೈಕೊಂಡು ನಡೆಯುವವನು ಧನ್ಯನು.** ಪ್ರಕಟನೆ ಪುಸ್ತಕದ ಅಧ್ಯಯನವು ಕೇವಲ ಒಂದು ಬೌದ್ಧಿಕ ವ್ಯಾಯಾಮ ಆಗಿರುವದಿಲ್ಲ ಎಂಬುದಾಗಿ ದೇವರು ನಮಗೆ ಜ್ಞಾಪಿಸುತ್ತಾನೆ; ಪುಸ್ತಕವು ನಮ್ಮ ಮನೋಭಾವಗಳನ್ನು ಮತ್ತು ಜೀವಿತಗಳನ್ನು ಮಾರ್ಪಡಿಸುವ ಉದ್ದೇಶವನ್ನು ಹೊಂದಿದೆ. ಈ ಆಶೀರ್ವಾದವು ಪುಸ್ತಕದಲ್ಲಿರುವ ಏಳು ಧನ್ಯನುಡಿಗಳೊಳಗೆ ಆರನೆಯದ್ದಾಗಿದೆ.

## ಯೋಹಾನ ಮತ್ತು ದೇವದೂತನು (22:8, 9)

**[8]ಈ ಸಂಗತಿಗಳನ್ನು ಕೇಳಿ ಕಂಡವನು ಯೋಹಾನನೆಂಬ ನಾನೇ. ನಾನು ಕೇಳಿ ಕಂಡಾಗ ಈ ಸಂಗತಿಗಳನ್ನು ನನಗೆ ತೋರಿಸಿದ ದೇವದೂತನಿಗೆ ನಮಸ್ಕಾರಮಾಡಬೇಕೆಂದು ಅವನ ಪಾದಕ್ಕೆ ಬಿದ್ದೆನು. [9]ಅವನು ನನಗೆ - ಮಾಡಬೇಡ ನೋಡು; ನಾನು ನಿನಗೂ ಪ್ರವಾದಿಗಳಾಗಿರುವ ನಿನ್ನ ಸಹೋದರರಿಗೂ ಈ ಪುಸ್ತಕದಲ್ಲಿ ಬರೆದಿರುವ ಮಾತುಗಳನ್ನು ಕೈಕೊಂಡು ನಡೆಯುವವರಿಗೂ ಜೊತೆಯ ದಾಸನಾಗಿದ್ದೇನೆ; ದೇವರಿಗೇ ನಮಸ್ಕಾರಮಾಡು ಎಂದು ಹೇಳಿದನು.**

**ವಚನ 8.** ಯೋಹಾನನು ಹೀಗೆ ಬರೆಯುತ್ತಾನೆ, **ಈ ಸಂಗತಿಗಳನ್ನು ಕೇಳಿ ಕಂಡವನು ಯೋಹಾನನೆಂಬ ನಾನೇ.** ಮೂಲ ವಾಕ್ಯದಲ್ಲಿ, **ನಾನೇ** ಎಂಬುದು ಒತ್ತಿ ಹೇಳಲ್ಪಟ್ಟಿದೆ. ತಾನು ಬರೆಯುವದು ಪ್ರಮಾಣೀಕೃತವಾಗಿರುತ್ತದೆ ಎಂಬ ನಿಶ್ಚಯತೆಯು ವಾಚಕರಿಗೆ ಇರಬೇಕೆಂಬುದು ಯೋಹಾನನ ಬಯಕೆಯಾಗಿತ್ತು. ಅಲ್ಲದೆ ಪುಸ್ತಕವು ಒಂದು ಅತಿಕ್ರಿಯಾಶೀಲತೆಯ ಕಲ್ಪನಾಶಕ್ತಿಯ ಫಲಿತವಾಗಿರಲಿಲ್ಲ, ಆದರೆ ತಾನು ನೋಡಿದ ಮತ್ತು ಕೇಳಿಸಿಕೊಂಡ ಸಂಗತಿಗಳನ್ನು ನಿಖರವಾಗಿ ಬರೆದಿದ್ದಾನೆ ಎಂಬುದನ್ನು ಸಹ ವಾಚಕರು ತಿಳಿದುಕೊಳ್ಳಬೇಕೆಂಬುದು ಆತನ ಬಯಕೆಯಾಗಿತ್ತು. ಹೀಗೆ ಕೆಲವರು ಯೋಚಿಸುವ ಪ್ರಕಾರ, ಪ್ರಕಟನೆ ಪುಸ್ತಕವು ಪ್ರೇರಿತವಲ್ಲದ ಮೂಲಗಳಿಂದ ಆರಿಸಿಕೊಂಡ ಒಂದು ವಿಂಗಡಣೆ ಆಗಿರುವದಿಲ್ಲ; ಇದು *ಆತನಿಂದಲೇ* ಬರುವದಾಗಿದೆ ಎಂಬುದನ್ನು ದೇವರು ವಾಚಕನಿಗೆ ಜ್ಞಾಪಿಸುತ್ತಾನೆ.

ದೇವದೂತನು ಯೋಹಾನನಿಗೆ ಪರಲೋಕದ ಕುರಿತು ಹೇಳುತ್ತಿರುವ ವೇಳೆ, ಯೋಹಾನನು 19ನೇ ಅಧ್ಯಾಯದಲ್ಲಿ ನಡೆದ ಪ್ರಕಾರವೇ ಪುನಃ ಭಾವಪರವಶನಾದನು - ಮತ್ತು ಅದೇ ತಪ್ಪನ್ನು ಮಾಡಿದನು: **ನಾನು ಕೇಳಿ ಕಂಡಾಗ ಈ ಸಂಗತಿಗಳನ್ನು ನನಗೆ ತೋರಿಸಿದ ದೇವದೂತನಿಗೆ ನಮಸ್ಕಾರಮಾಡಬೇಕೆಂದು ಅವನ ಪಾದಕ್ಕೆ ಬಿದ್ದೆನು.**

Burton Coffmanನು ಯೋಹಾನನ ಕ್ರಿಯೆಯು ಇಲ್ಲಿ 19ನೇ ಅಧ್ಯಾಯದಲ್ಲಿದ್ದಕ್ಕಿಂತ

ವ್ಯತ್ಯಾಸವಾಗಿದೆ ಎಂಬ ಅಭಿಪ್ರಾಯ ಪಡುತ್ತಾನೆ.[5] 19ನೇ ಅಧ್ಯಾಯವು "*ಅವನಿಗೆ* ನಮಸ್ಕಾರಮಾಡಬೇಕೆಂದು" ಅಪೊಸ್ತಲನು ದೇವದೂತನ ಪಾದಗಳ ಮುಂದೆ ಬಿದ್ದನು ಎಂದು ಹೇಳುತ್ತದೆ (19:10; ಒತ್ತಿ ಹೇಳಿದ್ದು ನನ್ನದು), ಅದೇ ವೇಳೆಯಲ್ಲಿ 22ನೇ ಅಧ್ಯಾಯವು ಅಪೊಸ್ತಲನು ನಮಸ್ಕಾರಮಾಡಬೇಕೆಂದು ದೇವದೂತನ ಪಾದಕ್ಕೆ **ಬಿದ್ದೆನು** ಎಂದು ಹೇಳುತ್ತದೆ, ಮತ್ತು ದೇವರ ಸಂದೇಶಕನ ಮುಂದೆ ಅಡ್ಡಬೀಳುವ ಮೂಲಕ ಅದನ್ನು ಮಾಡುವದಕ್ಕೆ ಪ್ರಯತ್ನಿಸಿದ್ದೇ ಆತನ ಪಾಪವಾಗಿತ್ತು. ಎರಡು ವಾಕ್ಯಭಾಗಗಳು ಬಹಳ ಸಮಾನಾರ್ಥವುಳ್ಳವುಗಳಾಗಿದ್ದು ಬಹುಶಃ ಅವುಗಳು ಯೋಹಾನನು ಮಾಡಿದ ಒಂದೇ ತಪ್ಪಿನ ಕುರಿತು ಬಣ್ಣಿಸುತ್ತವೆ: ಸೃಷ್ಟಿಕರ್ತನಿಗೆ ಬದಲಾಗಿ ಸೃಷ್ಟಿ ಜೀವಿಯನ್ನು ಆರಾಧಿಸುವದು. ಹಾಗಿದ್ದರೂ, Coffmanನ ಆಲೋಚನೆಗಳನ್ನು ಪರಿಗಣಿಸುವದು ಯುಕ್ತವಾಗಿದೆ.

**ವಚನ 9.** ದೇವದೂತನು 19:10ರ ಸಂದೇಶವನ್ನು ಪುನರಾವರ್ತಿಸುತ್ತಾನೆ: **ಮಾಡಬೇಡ ನೋಡು; ನಾನು ನಿನಗೂ ಪ್ರವಾದಿಗಳಾಗಿರುವ ನಿನ್ನ ಸಹೋದರರಿಗೂ ಈ ಪುಸ್ತಕದಲ್ಲಿ ಬರೆದಿರುವ ಮಾತುಗಳನ್ನು ಕೈಕೊಂಡು ನಡೆಯುವವರಿಗೂ ಜೊತೆಯ ದಾಸನಾಗಿದ್ದೇನೆ; ದೇವರಿಗೇ ನಮಸ್ಕಾರಮಾಡು.** ಯೋಹಾನನು ಹೇಗೋ ದೇವದೂತನು ಹಾಗೆಯೇ ಅಪ್ಪಣೆಗಳನ್ನು ನೆರವೇರಿಸುವದಕ್ಕೆ ಬಂದಿದ್ದವನು, ಮತ್ತು ಆರಾಧನೆಯ ವಸ್ತುವಾಗಕೂಡದು. "ಸಭೆಯ ಅನಂತರದ ಇತಿಹಾಸದಲ್ಲಿ ಮನುಷ್ಯನು ಒಬ್ಬನೇ ಸತ್ಯ ದೇವರ ಆರಾಧನೆಯ ಕಡೆಯಿಂದ ವಿಮುಖರಾಗಿ ದೇವದೂತರ ಹಾಗೂ 'ಸಂತರ' ತಾರಾಗಣವನ್ನೇ ತಮ್ಮ ಪೂಜ್ಯನೀಯ ವಸ್ತುಗಳೊಳಗೆ ಸೇರ್ಪಡೆಗೊಳಿಸಿಕೊಂಡದ್ದು ದುರಂತಗಳಲ್ಲೊಂದಾಗಿದೆ."[6]

## "ಪುಸ್ತಕಕ್ಕೆ ಮುದ್ರೆ ಹಾಕಬೇಡ" (22:10, 11)

**[10]ಇದಲ್ಲದೆ ಅವನು ನನಗೆ - ಈ ಪುಸ್ತಕದಲ್ಲಿರುವ ಪ್ರವಾದನಾವಾಕ್ಯಗಳನ್ನು ಗುಪ್ತವಾಗಿಡಬೇಡ; ಇವು ನೆರವೇರುವ ಸಮಯವು ಸಮೀಪವಾಗಿದೆ. [11]ಅನ್ಯಾಯ ಮಾಡುವವನು ಇನ್ನೂ ಅನ್ಯಾಯಮಾಡಲಿ; ಮೈಲಿಗೆಯಾದವನು ತನ್ನನ್ನು ಇನ್ನೂ ಮೈಲಿಗೆಮಾಡಿಕೊಳ್ಳಲಿ; ನೀತಿವಂತನು ಇನ್ನೂ ನೀತಿಯನ್ನು ಅನುಸರಿಸಲಿ; ಪವಿತ್ರನು ತನ್ನನ್ನು ಇನ್ನೂ ಪವಿತ್ರಮಾಡಿಕೊಳ್ಳಲಿ.**

7ನೇ ವಚನವು ವಿಧೇಯತೆಯ ಅಗತ್ಯತೆಯ ಬಗ್ಗೆ ಒತ್ತಿ ಹೇಳಿತು (ನೋಡಿರಿ ವಚನಗಳು 14, 15), ಆದರೆ ಕರ್ತನಿಗೆ ನಾವು *ಯಾವಾಗ* ವಿಧೇಯರಾಗತಕ್ಕದ್ದು? ಆ ಪ್ರಶ್ನೆಗೆ ಉತ್ತರವು 10 ಮತ್ತು 11 ವಚನಗಳಲ್ಲಿ ಸೂಚಿಸಲ್ಪಟ್ಟಿದೆ, ಇವುಗಳು ವೈಶಿಷ್ಟ್ಯವಾದ ಭಾಷೆಯನ್ನೊಳಗೊಂಡಿರುವ ವಚನಗಳಾಗಿವೆ.

**ವಚನ 10. ಇದಲ್ಲದೆ ಅವನು ನನಗೆ - ಈ ಪುಸ್ತಕದಲ್ಲಿರುವ ಗುಪ್ತವಾಗಿಡಬೇಡ; ಇವು ನೆರವೇರುವ ಸಮಯವು ಸಮೀಪವಾಗಿದೆ. ಸಮಯವು ಸಮೀಪವಾಗಿದೆ** ಎಂಬ ಪದಗುಚ್ಛವು ಪ್ರಕಟನೆ ಪುಸ್ತಕದ ಪ್ರಾಥಮಿಕ ಉದ್ದೇಶವು ಆ ದಿನದ ಹಿಂಸೆಗೊಳಗಾದ ಕ್ರೈಸ್ತರನ್ನು ಪ್ರೋತ್ಸಾಹಿಸುವದೇ ಆಗಿತ್ತು, ಹೊರತು ಭವಿಷ್ಯದಲ್ಲಿ ಸಾವಿರಾರು ವರ್ಷಗಳ ನಂತರ ಸಂಭವಿಸುವ ಘಟನೆಗಳ ವೇಳಾಪಟ್ಟಿಯೊಂದನ್ನು ಕೊಡುವದು ಆಗಿರಲಿಲ್ಲ ಎಂಬುದಾಗಿ ವಾಚಕನಿಗೆ ಜ್ಞಾಪಿಸುತ್ತದೆ. **ಈ ಪುಸ್ತಕದಲ್ಲಿರುವ ಪ್ರವಾದನವಾಕ್ಯಗಳನ್ನು ಗುಪ್ತವಾಗಿಡಬೇಡ** ಎಂಬುದು ಸಂದೇಶವು *ಆಗ* ದೂರ ಹಾಗೂ ವ್ಯಾಪಕವಾಗಿ ಹರಡಿಸಲ್ಪಡತಕ್ಕದ್ದಾಗಿತ್ತೆಂಬುದನ್ನು ಒತ್ತಿ ಹೇಳುತ್ತದೆ. ಹೀಗಿರುವದರಿಂದ ಈ ಆಜ್ಞೆಯು ದಾನಿಯೇಲನಿಗೆ ಕೊಟ್ಟ ಆಜ್ಞೆಗೆ

ವಿರುದ್ಧವಾಗಿದೆ, ಆತನಿಗೆ ಅವನ ಸಂದೇಶವನ್ನು "ಮುದ್ರೆಹಾಕು" (ದಾನಿಯೇಲ 12:4) ಎಂದು ಹೇಳಲಾಗಿತ್ತು.

**ವಚನ 11.** ಯೋಹಾನನಿಗೆ ಇನ್ನಷ್ಟು ಅಪ್ಪಣೆಗಳನ್ನು ಕೊಟ್ಟು ಹೇಳಿದ್ದೇನೆಂದರೆ, **ಅನ್ಯಾಯ ಮಾಡುವವನು ಇನ್ನೂ ಅನ್ಯಾಯಮಾಡಲಿ; ಮೈಲಿಗೆಯಾದವನು ತನ್ನನ್ನು ಇನ್ನೂ ಮೈಲಿಗೆಮಾಡಿಕೊಳ್ಳಲಿ; ನೀತಿವಂತನು ಇನ್ನೂ ನೀತಿಯನ್ನು ಅನುಸರಿಸಲಿ; ಪವಿತ್ರನು ತನ್ನನ್ನು ಇನ್ನೂ ಪವಿತ್ರಮಾಡಿಕೊಳ್ಳಲಿ.** ನೀತಿವಂತರು ನೀತಿವಂತರಾಗಿ ಉಳಿಯಬೇಕೆಂಬುದಾಗಿ ಕರ್ತನು ಏಕೆ ಬಯಸುತ್ತಾನೆ, ಮತ್ತು ಪವಿತ್ರನು ಪವಿತ್ರನಾಗಿ ಉಳಿಯಬೇಕೆಂದು ಆತನು ಏಕೆ ಬಯಸುತ್ತಾನೆಂಬುದನ್ನು ಅರ್ಥಮಾಡಿಕೊಳ್ಳುವದು ಸುಲಭವಾಗಿರುತ್ತದೆ - ಆದರೆ ತಪ್ಪುಮಾಡುವವರಿಗೆ ಮತ್ತು **ಮೈಲಿಗೆಯಾದವರಿಗೆ** ಅವರ ದುರ್ಮಾರ್ಗಗಳಲ್ಲಿ ಮುಂದುವರೆಯುವಂತೆ ತನ್ನ ಸಂದೇಶಕನಿಂದ ಏಕೆ ಹೇಳಿಸಿದನು? ಈ ಸಂದರ್ಭವು ಒಂದು ವಾಕ್ಯಭಾಗವು ಏನು ಕಲಿಸುತ್ತದೆಂಬುದಕ್ಕಿಂತ ಅದು ಏನನ್ನು ಕಲಿಸುವದಿಲ್ಲ ಎಂಬುದಾಗಿ ನಾವು ಹೆಚ್ಚು ದೃಢವಿಶ್ವಾಸದಿಂದ ಇರಬಹುದಾದ ಸಮಯಗಳಲ್ಲೊಂದಾಗಿರುತ್ತದೆ: (1) ಮನುಷ್ಯನು ಹೇಗೇ ಜೀವಿಸಿದರೂ ಸರಿಯೇ, ಆತನು ಪರಲೋಕಕ್ಕೆ ಹೋಗುವನು ಎಂಬುದಾಗಿ ಇದು ಕಲಿಸುವ*ದಿಲ್ಲ* (ನೋಡಿರಿ ವಚನಗಳು 14, 15). (2) ಇದು ತಪ್ಪು ಮಾಡುವದಕ್ಕೆ ಒಂದು ಪ್ರೋತ್ಸಾಹವಾಗಿರಬೇಕೆಂಬ ಉದ್ದೇಶ ಹೊಂ*ದಿಲ್ಲ* ಯಾಕೆಂದರ ವಾಕ್ಯಭಾಗದಲ್ಲಿ *ಸರಿ*ಯಾದದ್ದನ್ನು ಮಾಡುವದರ ಮೇಲೆ ಒತ್ತು ಕೊಡಲಾಗಿರುತ್ತದೆ. (3) ಪಾಪ ಮಾಡುವವರೆಲ್ಲಾ ನಿರೀಕ್ಷೆಯಿಲ್ಲದವರು, ಮತ್ತು ಅವರ ಕುರಿತು ಚಿಂತಿಸುವ ಅವಶ್ಯಕತೆಯಿರುವದಿಲ್ಲ ಎಂದು ಇದು ಕಲಿಸುವ*ದಿಲ್ಲ*. 17ನೇ ವಚನದಲ್ಲಿನ ಆಮಂತ್ರಣವನ್ನು ಗಮನಿಸಿರಿ.

ಹಾಗಾದರೆ, 11ನೇ ವಚನದ ಉದ್ದೇಶವಾದರೂ ಏನಾ*ಗಿದೆ*? ವಚನದ ಮುಂಚೆ ಮತ್ತು ನಂತರದಲ್ಲಿ ಸಮಯವು ಕಡಿಮೆಯಾಗಿರುವದರ ಮೇಲೆ ಕೊಡಲಾಗಿರುವ ಒತ್ತಿನ ಆಧಾರದಲ್ಲಿ (ವಚನಗಳು 10, 12), ಸಂದೇಶವು ಬಹುಶಃ ಸಮಯ ಹಾಗೂ ಸದವಕಾಶಗಳು ತೀರಿ ಹೋಗುತ್ತಿವೆ ಎಂಬುದಾಗಿರಬಹುದು. ಭಕ್ತಿಹೀನರು ತಮ್ಮ ಜೀವಿತಗಳನ್ನು ತಕ್ಷಣವೇ ಬದಲಾಯಿಸಿಕೊಳ್ಳದಿದ್ದರೆ, ಬಹಳ ತಡವಾಗಿ ಹೋಗಲಿತ್ತು. ಸಿದ್ಧತೆ ಮಾಡಿಕೊಳ್ಳದವರು ನಿತ್ಯತ್ವದುದ್ದಕ್ಕೂ ಸಿದ್ಧರಾಗದೆಯೇ ಉಳಿದರೆ, ಈ ಜೀವಿತದಲ್ಲಿ ಸಿದ್ಧರಾಗಿರುವವರು ಆ ಸ್ಥಾನವನ್ನು ಯುಗಯುಗಾಂತರಗಳಲ್ಲಿಯೂ ಉಳಿಸಿಕೊಳ್ಳುವರು.

11ನೇ ವಚನದ ಅರ್ಥದ ವಿಷಯದಲ್ಲಿ ಇನ್ನು ಕೆಲವು ಸಾಧ್ಯತೆಗಳಿರುತ್ತವೆ: ಬಹುಶಃ ವಿಪರ್ಯಾಸ ಅಥವಾ ವ್ಯಂಗ್ಯೋಕ್ತಿ ಅಡಕವಾಗಿರಬಹುದು: "ಆಯ್ತು ನಿಮ್ಮಿಷ್ಟದಂತೆ ಜೀವಿಸಿರಿ ... ಆದರೆ ಅದರ ಪರಿಣಾಮಗಳನ್ನು ಅನುಭವಿಸುವದಕ್ಕೆ ಸಿದ್ಧರಾಗಿರಿ." ಕೆಲವರು ಪ್ರಸಂಗಿ 11:9ರೊಂದಿಗೆ ಸಮಾನಾರ್ಥವನ್ನು ಕಾಣುತ್ತಾರೆ, ಅಲ್ಲಿ ಯೌವನಸ್ಥನಿಗೆ ತನ್ನ ಹೃದಯವು ಹೇಳಿದಂತೆ ನಡೆಯುವಂತೆ ಹೇಳಲಾಗುತ್ತದೆ, ಆದರೆ "ಈ ಎಲ್ಲಾ ವಿಷಯಗಳಲ್ಲಿಯೂ" ದೇವರು ಅವನನ್ನು ನ್ಯಾಯತೀರ್ಪಿಗೆ ಗುರಿ ಮಾಡುವನೆಂಬುದಾಗಿ ಆತನಿಗೆ ಜ್ಞಾಪಿಸಲಾಗುತ್ತದೆ. ಇನ್ನು ಕೆಲವರು 11ನೇ ವಚನದ ಮೊದಲ ಭಾಗದಲ್ಲಿ ಪಾಪದಿಂದ ಬಹುವಾಗಿ ಕಠಿಣಗೊಂಡವರಾಗುವ ಕಾರಣದಿಂದ ಬದಲಾಗುವದಕ್ಕೆ ಸಾಧ್ಯವಿಲ್ಲದವರಾಗುವವರ ಕುರಿತು ಬಣ್ಣನೆಯೊಂದಿರುತ್ತದೆಂದು ಕಾಣುತ್ತಾರೆ (ನೋಡಿರಿ ಇಬ್ರಿಯ 6:4-6).

10 ಮತ್ತು 11 ವಚನಗಳಿಂದ ಕನಿಷ್ಠ ಇಷ್ಟಾದರೂ ಸ್ಪಷ್ಟವಾಗಿರುತ್ತದೆ: ಒಬ್ಬ ವ್ಯಕ್ತಿಯು ತನ್ನ ವರ್ತಮಾನದ ಕುರಿತು ನಿಶ್ಚಯತೆಯಿಂದಿರಬಹುದಾದ ಏಕೈಕ ಸಮಯ. "*ಇದೇ* ಆ ರಕ್ಷಣೆಯ

ದಿನ" ಎಂದು ಬೈಬಲ್ ಕಲಿಸುತ್ತದೆ (2 ಕೊರಿಂಥ 6:2; ಒತ್ತಿ ಹೇಳಿದ್ದು ನನ್ನದು). ತಾನು ಕರ್ತನಿಗೆ ಪ್ರತಿಕ್ರಿಯೆಯನ್ನು ತೋರಬೇಕು ಎಂದು ಒಬ್ಬ ವ್ಯಕ್ತಿಗೆ ಗೊತ್ತಿದ್ದೂ ಅದನ್ನು ಮಾಡಲು ವಿಫಲನಾದರೆ, ಮೂರರೊಳಗೆ ಒಂದು ಸಂಭವಿಸಬಲ್ಲದು: ಕ್ರಿಸ್ತನು ಬರಬಹುದು (ಪ್ರಕಟನೆ 1:7; 22:7, 12, 20), ಆ ವ್ಯಕ್ತಿಯು ಮರಣಿಸಬಹುದು (ಇಬ್ರಿಯ 9:27), ಅಥವಾ ಆತನು ಪಾಪದಲ್ಲಿ ಬಹಳ ಕಠಿಣಗೊಂಡವನಾಗುವದರಿಂದ ಆತನಲ್ಲಿ ಪಶ್ಚಾತ್ತಾಪ ಪಡುವಂತೆ ಪುನರುಜ್ಜೀವನಗೊಳಿಸುವದು ಅಸಾಧ್ಯವಾಗುತ್ತದೆ (ಇಬ್ರಿಯ 6:4-6).

## "ನಾನು ಬೇಗನೆ ಬರುತ್ತೇನೆ" (22:12-15)

**[12]ಇಗೋ, ಬೇಗ ಬರುತ್ತೇನೆ; ನಾನು ಪ್ರತಿಯೊಬ್ಬನಿಗೆ ಅವನವನ ನಡತೆಯ ಪ್ರಕಾರ ಕೊಡತಕ್ಕ ಪ್ರತಿಫಲವು ನನ್ನ ಕೈಯಲ್ಲಿ ಅದೆ. [13]ನಾನೇ ಆದಿಯೂ ಅಂತವೂ ಮೊದಲನೆಯವನೂ ಕಡೆಯವನೂ ಪ್ರಾರಂಭವೂ ಸಮಾಪ್ತಿಯೂ ಆಗಿದ್ದೇನೆ. [14]ತಮ್ಮ ನಿಲುವಂಗಿಗಳನ್ನು ತೊಳಕೊಂಡವರು ಧನ್ಯರು; ಅವರಿಗೆ ಜೀವವೃಕ್ಷದ ಹಕ್ಕು ಇರುವದು; ಅವರು ಬಾಗಿಲುಗಳಿಂದ ಆ ಪಟ್ಟಣದೊಳಕ್ಕೆ ಸೇರುವರು. [15]ನಾಯಿಗಳಂತಿರುವವರೂ ಮಾಟಗಾರರೂ ಜಾರರೂ ಕೊಲೆಗಾರರೂ ವಿಗ್ರಹಾರಾಧಕರೂ ಸುಳ್ಳಾದದ್ದನ್ನು ಪ್ರೀತಿಸಿ ನಡಿಸುವವರೆಲ್ಲರೂ ಹೊರಗಿರುವರು ಎಂದು ಹೇಳಿದನು.**

**ವಚನ 12.** ಪ್ರಕಟನೆ ಪುಸ್ತಕವು ಕೃಪೆಯ ಕುರಿತು ಒತ್ತಿ ಹೇಳುವದರ ಮೂಲಕ ಆರಂಭಗೊಳ್ಳುತ್ತದೆ ಮತ್ತು ಅಂತ್ಯಗೊಳ್ಳುತ್ತದೆ (1:4; 22:21), ಆದರೆ ಪುಸ್ತಕವು ವಿಧೇಯತೆ, ಕ್ರಿಯೆಗಳು, ಮತ್ತು ನಾವು ಜೀವಿಸಬೇಕಾದ ಜೀವನದ ವಿಧದ ಕುರಿತಾಗಿ ಸಹ ಬಹಳವಾದ ಒತ್ತು ಕೊಟ್ಟಿರುತ್ತದೆ (2:2; 14:13; 20:12). ಯೇಸುವು ಪುನಃ, **ಇಗೋ, ಬೇಗ ಬರುತ್ತೇನೆ** ಎಂದು ಹೇಳಿದ ಮೇಲೆ, **ನಾನು ಪ್ರತಿಯೊಬ್ಬನಿಗೆ ಅವನವನ ನಡತೆಯ ಪ್ರಕಾರ ಕೊಡತಕ್ಕ ಪ್ರತಿಫಲವು ನನ್ನ ಕೈಯಲ್ಲಿ ಅದೆ** ಎಂದನು (ವಚನಗಳು 7, 20ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). **ಪ್ರತಿಫಲ** ಎಂಬುದನ್ನು ಅನುವಾದಿಸಿರುವ, μισθός (*misthos*) ಎಂಬ ಗ್ರೀಕ್ ಪದವು, "ಸಲ್ಲಬೇಕಾಗಿರುವ" ಎಂಬ ಅರ್ಥವನ್ನು ಕೊಡುತ್ತದೆ; ಅದು ಕೆಲವು ಸಾರಿ ಸಂಬಳವನ್ನು ಸೂಚಿಸುವದಕ್ಕೆ ಬಳಸಲ್ಪಡುತ್ತಿತ್ತು (ನೋಡಿರಿ ಮತ್ತಾಯ 20:8; ಲೂಕ 10:7; ಯೋಹಾನ 4:36; 1 ತಿಮೊಥೆ 5:18; ಯಾಕೋಬ 5:4). ನಾವು ನಮ್ಮ ಕ್ರಿಯೆಗಳಿಂದ ರಕ್ಷಣೆ ಹೊಂದಿಕೊಳ್ಳಲು ಸಾಧ್ಯವಿಲ್ಲ (ಎಫೆಸ 2:8, 9), ಆದರೆ ಅಲ್ಲದೆ *ಅವುಗಳಿಲ್ಲದೆ*ಯೂ ನಾವು ರಕ್ಷಣೆಯನ್ನು ಹೊಂದಿಕೊಳ್ಳಲು ಸಾಧ್ಯವಿಲ್ಲ (ಯಾಕೋಬ 2:24).

**ವಚನ 13.** 1ನೇ ಅಧ್ಯಾಯವು ದೇವರು ಹಾಗೂ ಕ್ರಿಸ್ತನಿಗಾಗಿ ಬಳಸಲ್ಪಟ್ಟ ವಿಶೇಷ ಬಿರುದುಗಳನ್ನೊಳಗೊಂಡಿತ್ತು. 1:8ರಲ್ಲಿ ಕರ್ತನು ಹೀಗೆ ಹೇಳಿದನು, "ನಾನು ಆದಿಯೂ ಅಂತವೂ ಆಗಿದ್ದೇನೆ." "ಕರ್ತನು" ಎಂಬ ಜೈವಿಕ ಪದಗುಚ್ಛವು ಬಳಸಲ್ಪಟ್ಟಿರುವದಕ್ಕೆ ಕಾರಣವೇನೆಂದರೆ ಆ ವಚನದಲ್ಲಿ ಮಾತಾಡುತ್ತಿರುವದು ತಂದೆಯೋ ಅಥವಾ ಮಗನೋ ಎಂಬುದು ಸ್ಪಷ್ಟವಾಗಿರುವದಿಲ್ಲ ಎಂಬುದೆ (1:8ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಪುನಃ 1:17ರಲ್ಲಿ ಯೇಸುವು ಹೇಳಿದ್ದೇನೆಂದರೆ, "ನಾನು ಮೊದಲನೆಯವನೂ ಕಡೆಯವನೂ" ಆಗಿದ್ದೇನೆ ಎಂಬದೆ (1:17ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಈಗ, 22ನೇ ಅಧ್ಯಾಯದಲ್ಲಿ ಯೇಸುವು ಹೀಗೆ ಹೇಳುತ್ತಾನೆ, **ನಾನೇ ಆದಿಯೂ ಅಂತವೂ ಮೊದಲನೆಯವನೂ ಕಡೆಯವನೂ ಪ್ರಾರಂಭವೂ ಸಮಾಪ್ತಿಯೂ ಆಗಿದ್ದೇನೆ.** ತನ್ನ ಮಗನು ದೈವಿಕನು ಹಾಗೂ ಆತನು

ವಿಧೇಯವಾಗತಕ್ಕವನು ಹಾಗೂ ಸನ್ಮಾನಿಸಲ್ಪಡತಕ್ಕವನು ಆಗಿದ್ದಾನೆಂಬುದನ್ನು ಕ್ರೈಸ್ತರು ಜ್ಞಾಪಕದಲ್ಲಿಟ್ಟುಕೊಳ್ಳಬೇಕೆಂದು ದೇವರು ಬಯಸುತ್ತಾನೆ.

**ವಚನ 14.** ಪುಸ್ತಕದ ಉಪದೇಶಗಳಿಗೆ "ಕೈಕೊಂಡು ನಡೆಯುವವರು" ಆಶೀರ್ವದಿಸಲ್ಪಡುವವರಾಗಿದ್ದಾರೆ ಎಂಬುದನ್ನು ಈಗಾಗಲೇ ಹೇಳಲಾಗಿರುತ್ತದೆ (ವ. 7). 14ನೇ ವಚನವು ಆ ಯೋಚನೆಯನ್ನು ಇನ್ನಷ್ಟು ವಿಸ್ತರಿಸುತ್ತದೆ: **ತಮ್ಮ ನಿಲುವಂಗಿಗಳನ್ನು ತೊಳಕೊಂಡವರು ಧನ್ಯರು; ಅವರಿಗೆ ಜೀವವೃಕ್ಷದ ಹಕ್ಕು ಇರುವದು; ಅವರು ಬಾಗಿಲುಗಳಿಂದ ಆ ಪಟ್ಟಣದೊಳಕ್ಕೆ ಸೇರುವರು.** ಈ ಆಶೀರ್ವಾದವು ಪ್ರಕಟನೆ ಪುಸ್ತಕದಲ್ಲಿರುವ ಏಳು ಧನ್ಯನುಡಿಗಳೊಳಗೆ ಕಡೆಯದಾಗಿದೆ (1:3; 14:13; 16:15; 19:9; 20:6; 22:7, 14).

**ತಮ್ಮ ನಿಲುವಂಗಿಗಳನ್ನು ತೊಳಕೊಂಡವರು** ಎಂಬ ಪದಗುಚ್ಛವು ದೇವರ ಆಶೀರ್ವಾದಗಳನ್ನು ಆನಂದಿಸುವದಕ್ಕಾಗಿ ಆತನ ಕೃಪೆಗೆ ಮಾನವರು ನೀಡಬೇಕಾದ ಪ್ರತಿಕ್ರಿಯೆಯ ಕಡೆಗೆ ಗಮನ ಸೆಳೆಯುತ್ತದೆ. ಮೂಲ ವಾಕ್ಯದಲ್ಲಿ, "ತೊಳೆ" ಎಂಬುದು ವರ್ತಮಾನಕಾಲ ರೂಪದಲ್ಲಿದೆ ಮತ್ತು "ತೊಳಕೊಳ್ಳುತ್ತಲಿರುವವರು" ಎಂಬುದಾಗಿ ಅನುವಾದಿಸಲ್ಪಡಬಹುದಾಗಿದೆ. ಕ್ರೈಸ್ತರು ದೇವರ ವಾಕ್ಯದ ಬೆಳಕಿನಲ್ಲಿ ನಿರಂತರವಾಗಿ ನಡೆಯುತ್ತಿರುವ ವೇಳೆ, ಕ್ರಿಸ್ತನ ರಕ್ತವು ಅವರನ್ನು ನಿರಂತರವಾಗಿ ತೊಳೆದು ಶುದ್ಧಮಾಡುತ್ತಲಿರುತ್ತದೆ (1 ಯೋಹಾನ 1:7).

KJVಯಲ್ಲಿ ಬೇರೆ ರೀತಿಯಲ್ಲಿ ಇರುತ್ತದೆ: "ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವವರು ಧನ್ಯರು." ಗ್ರೀಕ್ ವಾಕ್ಯದಲ್ಲಿ, "ತಮ್ಮ ನಿಲುವಂಗಿಗಳನ್ನ ತೊಳಕೊಂಡವರು" (πλύνοντες τὰς στολὰς αὐτῶν, *plunontes tas stolas autōn*) ಮತ್ತು "ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವವರು" (ποιοῦντες τὰς ἐντολὰς αὐτοῦ, *poiountes tas entolas autou*) ಎಂಬ ಎರಡು ಪದಗುಚ್ಛಗಳು ನೋಟದಲ್ಲಿ ಒಂದೇ ರೀತಿಯಂತೆ ಕಾಣಿಸುತ್ತವೆ. ಗ್ರಂಥಪಾಠದ ಪುರಾವೆಯು "ತಮ್ಮ ನಿಲುವಂಗಿಗಳನ್ನು ತೊಳಕೊಂಡವರು" ಎಂಬುದರ ಪರವಾಗಿ ಇರುತ್ತದೆ, ಆದರೆ ಎರಡು ಪದಗುಚ್ಛಗಳ ಅರ್ಥವು ಮೂಲಭೂತವಾಗಿ ಒಂದೇ ಆಗಿರುತ್ತದೆ.

ನಾವು 7ನೇ ಅಧ್ಯಾಯದಲ್ಲಿ ನೋಡುವ ಪ್ರಕಾರ, ನಾವು ಯೇಸುವಿನ ಚಿತ್ತಕ್ಕೆ ವಿಧೇಯರಾಗುವ ಮೂಲಕವಾಗಿ ಆತನ ರಕ್ತದಲ್ಲಿ ನಮ್ಮ "ನಿಲುವಂಗಿಗಳನ್ನು ತೊಳಕೊಳ್ಳುತ್ತೇವೆ" (7:14ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ನಾವು ನಮ್ಮ ಜೀವಿತಗಳನ್ನು ಕರ್ತನಿಗೆ ಒಪ್ಪಿಸಿಕೊಳ್ಳಲು ಮನಸ್ಸುಳ್ಳವರಾಗಿರುವ ಹೊರತು, ನಾವು ಪರಲೋಕವನ್ನು ಸೇರುವದಕ್ಕೆ ಸಾಧ್ಯವಿಲ್ಲ. ಜೀವವೃಕ್ಷದ ಫಲವನ್ನು ತಿನ್ನುವ ಹಕ್ಕು ಇರುವ ಏಕೈಕ ಜನರೆಂದರೆ "ತಮ್ಮ ನಿಲುವಂಗಿಗಳನ್ನು ತೊಳಕೊಂಡವರೇ." ಹಾಗಿದ್ದರೂ, ನಾವು ನಮ್ಮ ರಕ್ಷಣೆಯನ್ನು ಸಂಪಾದಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕೆಂದು ದೇವರು ಬಯಸುತ್ತಾನೆ. ನಮ್ಮ "ನಿಲುವಂಗಿಗಳನ್ನು" ಶುದ್ಧಮಾಡುವಂತದ್ದು ಕ್ರಿಸ್ತನ ರಕ್ತವೇ ಎಂಬುದನ್ನು ನಾವು ಎಂದಿಗೂ ಮರೆಯಕೂಡದು (7:14). ನಾವು ದೇವರ ಅದ್ಭುತಕರವಾದ ಕೃಪೆಯ ಮೂಲಕವಾಗಿ ರಕ್ಷಿಸಲ್ಪಟ್ಟಿದ್ದೇವೆ.

**ವಚನ 15.** ನಾವು ಪಟ್ಟಣದಲ್ಲಿರುವವರು ಯಾರು (ಯಾರ ನಿಲುವಂಗಿಗಳು ಶುಭ್ರವಾಗಿರುತ್ತವೋ ಅವರು) ಎಂಬುದನ್ನು ಕಲಿತುಕೊಂಡೆವು. ಈಗ ನಮಗೆ ಅಲ್ಲಿ ಯಾರಾರು ಇರುವದಿಲ್ಲ ಎಂಬುದನ್ನು ಹೇಳಲಾಗುತ್ತದೆ: **ನಾಯಿಗಳಂತಿರುವವರೂ ಮಾಟಗಾರರೂ ಜಾರರೂ ಕೊಲೆಗಾರರೂ ವಿಗ್ರಹಾರಾಧಕರೂ ಸುಳ್ಳಾದದ್ದನ್ನು ಪ್ರೀತಿಸಿ ನಡಿಸುವವರೆಲ್ಲರೂ**

**ಹೊರಗಿರುವರು.** ನ್ಯಾಯತೀರ್ಪಿನ ದಿನದ ನಂತರ ದುಷ್ಟರು ಸೂರ್ಯಕಾಂತಶಿಲೆಯ ಗೋಡೆಯ ಆಚೆಯ ಕಡೆಯಲ್ಲಿ ಸುತ್ತಾಡುತ್ತಿರುತ್ತಾರೆ ಎಂಬುದಾಗಿ ವಾಚಕನು ಕಲ್ಪನೆ ಮಾಡಿಕೊಳ್ಳಕೂಡದು. **ಹೊರಗಿನವರು** ಎಂಬುದರ ಅರ್ಥವು ಅವರು "ಒಳಗೆ" ಇರುವದಿಲ್ಲ ಎಂದಷ್ಟೇ ಆಗಿದೆ. 22:15ರಲ್ಲಿ ಪಟ್ಟಿ ಮಾಡಲ್ಪಟ್ಟಿರುವವರೆಲ್ಲಾ ಬೆಂಕಿಯ ಕೆರೆಗೆ ದೊಬ್ಬಲ್ಪಡುವರು ಎಂಬುದನ್ನು 21:8ನೇ ವಚನವು ಸ್ಪಷ್ಟಗೊಳಿಸುತ್ತದೆ, ಅದು ಬೇರೊಂದು ಕಡೆಯಲ್ಲಿ "*ಹೊರಗೆ* ಕತ್ತಲೆ" ಎಂದು ಬಣ್ಣಿಸಲ್ಪಟ್ಟಿದೆ (ಮತ್ತಾಯ 8:12; ಒತ್ತಿ ಹೇಳಿದ್ದು ನನ್ನದು).

22:15ರಲ್ಲಿ ಭಕ್ತಿಹೀನರ ಪಟ್ಟಿಯು 21:8ರಲ್ಲಿ ಸಿಕ್ಕುವ ಪಟ್ಟಿಯೊಂದಿಗೆ ಸಾಮ್ಯತೆಯನ್ನು ಹೊಂದಿದೆ (21:8ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ), ಅದರಲ್ಲಿ **ನಾಯಿಗಳು** ಎಂಬ ಪದವು ಮಾತ್ರವೇ ಹೊರತಾಗಿರುತ್ತದೆ. ಪದವನ್ನು ಅರ್ಥಮಾಡಿಕೊಳ್ಳಬೇಕಾದರೆ, ಮುದ್ದು ಮಾಡಲ್ಪಡುವ ನಾಯಿ ಮರಿಯನ್ನು ಕುರಿತು ಯೋಚಿಸದಿರಿ, ಆದರೆ ನೋಣಗಳಿಂದ-ಕಚ್ಚಲ್ಪಟ್ಟು, ಹೊಲಸಾಗಿರುವಂಥ ಕುನ್ನಿಯ ಕುರಿತು ಯೋಚಿಸಿರಿ. ಪ್ರಕಟನೆ ಪುಸ್ತಕವು ಬರೆಯಲ್ಪಡುವ ವೇಳೆಯಲ್ಲಿ, ಗುರುಗುಟ್ಟುವ ನಾಯಿಗಳು ಹಿಂಡುಹಿಂಡಾಗಿ ಅಲೆದಾಡುತ್ತಿದ್ದವು ಮತ್ತು ಅವುಗಳು ಕೊಳೆತ ಶವಗಳನ್ನು ತಿನ್ನವವುಗಳೆಂದು ತಿರಸ್ಕಾರಕ್ಕೊಳಗಾಗಿದ್ದವು. ಬೈಬಲ್ ಕೆಲವು ಸಾರಿ ಭಕ್ತಿಹೀನರನ್ನು ಸೂಚಿಸುವದಕ್ಕೆ ಈ ಪದವನ್ನು ಬಳಸುತ್ತದೆ (ನೋಡಿರಿ ಧರ್ಮೋಪದೇಶಕಾಂಡ 23:18; ಕೀರ್ತನೆ 22:16, 20; ಯೆಶಾಯ 56:10, 11; ಮತ್ತಾಯ 7:6; ಫಿಲಿಪ್ಪಿ 3:2).

## ಆತ್ಮನ ಹಾಗೂ ಮದಲಗಿತ್ತಿಯ ಆಮಂತ್ರಣ (22:16, 17)

**16ಯೇಸುವೆಂಬ ನಾನು ನನ್ನ ಸಭೆಗಳ ಪ್ರಯೋಜನಾರ್ಥವಾಗಿ ಈ ಸಂಗತಿಗಳ ವಿಷಯದಲ್ಲಿ ನಿಮಗೆ ಸಾಕ್ಷಿಹೇಳುವದಕ್ಕೋಸ್ಕರ ನನ್ನ ದೂತನನ್ನು ಕಳುಹಿಸಿಕೊಟ್ಟೆನು. ನಾನು ದಾವೀದವಂಶವೆಂಬ ಬುಡದಿಂದ ಹುಟ್ಟಿದ ಚಿಗುರೂ ಅವನ ಸಂತತಿಯೂ ಉದಯಸೂಚಕವಾದ ಪ್ರಕಾಶವುಳ್ಳ ನಕ್ಷತ್ರವೂ ಆಗಿದ್ದೇನೆ.**
**17ಆತ್ಮನೂ ಮದಲಗಿತ್ತಿಯೂ - ಬಾ ಅನ್ನುತ್ತಾರೆ. ಕೇಳುವವನು - ಬಾ ಅನ್ನಲಿ. ಬಾಯಾರಿದವನು ಬರಲಿ. ಇಷ್ಟವುಳ್ಳವನು ಜೀವಜಲವನ್ನು ಕ್ರಯವಿಲ್ಲದೆ ತೆಗೆದುಕೊಳ್ಳಲಿ.**

**ವಚನ 16.** ಮೊದಲನೆಯ ಅಧ್ಯಾಯದಲ್ಲಿ ಯೋಹಾನನು "ಆಸ್ಯ ಸೀಮೆಯಲ್ಲಿದ್ದ ಏಳು ಸಭೆಗಳನ್ನು" ಉದ್ದೇಶಿಸಿ ಬರೆದನು (1:4; ನೋಡಿರಿ 1:11). ಕಡೇ ಅಧ್ಯಾಯದಲ್ಲಿ ಕರ್ತನು ಯೋಹಾನನಿಗೆ ಹೀಗೆ ಹೇಳಿದನು, **ಯೇಸುವೆಂಬ ನಾನು ನನ್ನ ಸಭೆಗಳ ಪ್ರಯೋಜನಾರ್ಥವಾಗಿ ಈ ಸಂಗತಿಗಳ ವಿಷಯದಲ್ಲಿ ನಿಮಗೆ ಸಾಕ್ಷಿಹೇಳುವದಕ್ಕೋಸ್ಕರ ನನ್ನ ದೂತನನ್ನು ಕಳುಹಿಸಿಕೊಟ್ಟೆನು.** ಪುನಃ, ದೇವರು ಸ್ಥಳೀಯ ಸಭೆಯ ಪ್ರಾಮುಖ್ಯತೆಯನ್ನು ಕುರಿತು ಒತ್ತಿ ಹೇಳಿದನು. ಇಡೀ ಪುಸ್ತಕವು ಸ್ಥಳೀಯ ಸಭೆಗಳಿಗೆ ಸಹಾಯ ಮಾಡಿ ಬಲಪಡಿಸುವದಕ್ಕೋಸ್ಕರವೇ ರಚಿಸಲ್ಪಟ್ಟಿದೆ ಎಂಬುದನ್ನು ಕ್ರೈಸ್ತರಿಗೆ ಆತನು ಜ್ಞಾಪಿಸಿದನು.

ಮೂಲ ವಾಕ್ಯದಲ್ಲಿ, **ಯೇಸುವೆಂಬ ನಾನು** ಎಂಬುದು ಒತ್ತಿ ಹೇಳಲ್ಪಟ್ಟಿದೆ (ವ. 8ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಪ್ರಕಟನೆ ಪುಸ್ತಕದ ಆರಂಭಿಕ ಮಾತುಗಳು ಇದು "ಯೇಸು ಕ್ರಿಸ್ತನ ಪ್ರಕಟನೆಯು" ಎಂದು ಘೋಷಿಸಿದವು (1:1). ಪುಸ್ತಕದುದ್ದಕ್ಕೂ, ಯೇಸುವೇ ಕೇಂದ್ರಬಿಂದುವಾಗಿರುತ್ತಾನೆ. ನಾವು ನೋಡಿರುವ ಪ್ರಕಾರ, ಆತನು ಮುಕ್ತಾಯದ ವಾಕ್ಯಭಾಗಗಳಲ್ಲಿ ಕೇಂದ್ರಬಿಂದುವಾಗಿ ಉಳಿಯುತ್ತಾನೆ. ಆತನು ಪುನಃ ಪುನಃ "ನಾನು

ಬರುತ್ತೇನೆ" ಎಂದು ಹೇಳಿರುತ್ತಾನೆ (ವಚನಗಳು 7, 12, 20). ಆತನು "ನಾನೇ ಆದಿಯೂ ಅಂತವೂ ಮೊದಲನೆಯವನೂ ಕಡೆಯವನೂ ಪ್ರಾರಂಭವೂ ಸಮಾಪ್ತಿಯೂ" ಎಂಬುದಾಗಿ ಕರೆಯಲ್ಪಟ್ಟಿದ್ದಾನೆ (ವ. 13). ಈಗ ಆತನು **ದಾವೀದವಂಶವೆಂಬ ಬುಡದಿಂದ ಹುಟ್ಟಿದ ಚಿಗುರೂ ಅವನ ಸಂತತಿಯೂ ಉದಯಸೂಚಕವಾದ ಪ್ರಕಾಶವುಳ್ಳ ನಕ್ಷತ್ರವೂ** ಎಂದು ಬಣ್ಣಿಸಲ್ಪಟ್ಟಿದ್ದಾನೆ (ನೋಡಿರಿ ಯೆಶಾಯ 11:1; 5:5ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

**ದಾವೀದವಂಶವೆಂಬ ಬುಡದಿಂದ ಹುಟ್ಟಿದ ಚಿಗುರೂ ಅವನ ಸಂತತಿಯೂ** ಎಂಬ ಪದಗುಚ್ಛವು ಪ್ರತಿಪಾದಿಸುವದೇನೆಂದರೆ, ಆತನ ದೇವತ್ವದಲ್ಲಿ, ಯೇಸುವು ದಾವೀದನ ಸಂತಾನದ ಮೂಲ ("ಬುಡದಿಂದ ಹುಟ್ಟಿದ ಚಿಗುರು") ಆಗಿದ್ದನು, ಮತ್ತು, ಆತನ ಮಾನತ್ವದಲ್ಲಿ, ಆತನು ದಾವೀದನ "ಸಂತಾನ" ಆಗಿದ್ದನು ಎಂಬದೆ. ಹಳೆಯ ಒಡಂಬಡಿಕೆಯಲ್ಲಿರುವ ದಾವೀದನಿಗೆ ಸಂಬಂಧಿಸಿದ ಪ್ರತಿಯೊಂದ ವಾಗ್ದಾನವು ಕ್ರಿಸ್ತನ ಜನನ, ಮರಣ, ಪುನರುತ್ಥಾನ, ಮತ್ತು ಪರಲೋಕಾರೋಹಣಗಳಲ್ಲಿ ನೆರವೇರಲ್ಪಟ್ಟಿತು (ನೋಡಿರಿ ಅಪೊಸ್ತಲರ ಕೃತ್ಯಗಳು 2:24-36). ಈ ವ್ಯಾಖ್ಯಾನಗ್ರಂಥದಲ್ಲಿ ಈ ಮುಂಚೆ ಹೇಳಲ್ಪಟ್ಟಿರುವ ಪ್ರಕಾರವೇ, ಯೇಸುವು *ಈಗ* ಪರಲೋಕದಲ್ಲಿ ದಾವೀದನ ಸಿಂಹಾಸನದ ಮೇಲೆ ಕೂತಿರುತ್ತಾನೆ.

ಯೇಸುವು **ಉದಯಸೂಚಕವಾದ ಪ್ರಕಾಶವುಳ್ಳ ನಕ್ಷತ್ರವೂ** ಎಂಬುದನ್ನು ಸಹ ಒತ್ತಿ ಹೇಳಲಾಗಿರುತ್ತದೆ. ಯೇಸುವು ಥುವತ್ತೈರದಲ್ಲಿನ ಜಯಹೊಂದುವವರಿಗೆ "ಉದಯಸೂಚಕ ನಕ್ಷತ್ರವನ್ನು" ಕೊಡುವೆನು ಎಂದು ಹೇಳಿದನು (2:28). ಉದಯ ನಕ್ಷತ್ರವು ಮುಂಜಾನೆಗೆ ಸ್ವಲ್ಪ ಮುಂಚೆ ಆಕಾಶದಲ್ಲಿ ಪ್ರಕಾಶಮಾನವಾಗಿ ಹೊಳೆಯುವ ಬೆಳಕಾಗಿರುತ್ತದೆ, ಸಾಮಾನ್ಯವಾಗಿ ಬಾನಂಚಿನ ಹತ್ತಿರದಲ್ಲಿರುವದಾಗಿದೆ. ಅದು ಒಂದು ಹೊಸ ದಿನವನ್ನು ಸಾರುತ್ತದೆ (2:28ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಪ್ರಕಟನೆ ಪುಸ್ತಕದಲ್ಲಿ ಯೇಸುವಿನ ಕುರಿತಾದ ಕಡೇ ಮಾತು ಏನೆಂದರೆ ಆತನು ನಮ್ಮ *ನಿರೀಕ್ಷೆ*ಯ ಮೂಲನಾಗಿದ್ದಾನೆ ಎಂಬುದೆ.

**ವಚನ 17.** ನಮ್ಮ ಕರ್ತನ ಕೃಪಾವಂತಿಕೆಯು ಒಂದು ಕೋಮಲವಾದ ಆಮಂತ್ರಣದಲ್ಲಿ ವ್ಯಕ್ತಪಡಿಸಲಾಗಿರುತ್ತದೆ: **ಆತ್ಮನೂ ಮದಲಗಿತ್ತಿಯೂ - ಬಾ ಅನ್ನುತ್ತಾರೆ. ಕೇಳುವವನು - ಬಾ ಅನ್ನಲಿ. ಬಾಯಾರಿದವನು ಬರಲಿ. ಇಷ್ಟವುಳ್ಳವನು ಜೀವಜಲವನ್ನು ಕ್ರಯವಿಲ್ಲದೆ ತೆಗೆದುಕೊಳ್ಳಲಿ.** (ಯೆಶಾಯ 55:1ರೊಂದಿಗೆ ಹೋಲಿಕೆ ಮಾಡಿರಿ.) ಕೆಲವು ಲೇಖಕರು ನಂಬುವದೇನೆಂದರೆ ಮೊದಲ ಎರಡು "ಬಾ" ಎಂಬವುಗಳು 20ನೇ ವಚನದಲ್ಲಿ ಇರುವ ಪ್ರಕಾರ, ಯೇಸುವನ್ನು ಉದ್ದೇಶಿಸಿ ಹೇಳಲಾಗಿದ್ದರೆ, ಮೂರನೆಯ "ಬರಲಿ" ಎಂಬುದು ನಾಶನ ಮಾರ್ಗದಲ್ಲಿರುವವರಿಗೆ ಹೇಳಲ್ಪಟ್ಟದ್ದಾಗಿದೆ. ಮೂರು ಸಹ ಸಮಾನಾರ್ಥವುಳ್ಳವುಗಳಾಗಿರುವ ಮತ್ತು ಪ್ರತಿಯೊಂದು ಕರ್ತನ ಬಳಿಗೆ ಬರುವ ಅಗತ್ಯವಿರುವವರಿಗೆ ಹೇಳಲ್ಪಟ್ಟಿರುತ್ತೆಂಬ ಸಾಧ್ಯತೆಯು ಅಧಿಕವಾಗಿದೆ.

**ಆತ್ಮ** ಎಂಬದು, ಇಡೀ ಬೈಬಲನ್ನು ಪ್ರೇರಿಸಿದ ಪ್ರಕಾರವೇ (2 ಪೇತ್ರ 1:21) ಪ್ರಕಟನೆ ಪುಸ್ತಕವನ್ನು ಪ್ರೇರಿಸಿದ ಪವಿತ್ರಾತ್ಮನಾಗಿದ್ದಾನೆ (2:7; 14:13). ಪ್ರಕಟನೆ ಪುಸ್ತಕದಲ್ಲಿ **ಮದಲಗಿತ್ತಿ** ಎಂದರೆ ಸಭೆಯೇ, ಅಂದರೆ ಯೇಸುವಿನ ರಕ್ತದಿಂದ ರಕ್ಷಿಸಲ್ಪಟ್ಟವರು. ಮತ್ತಾಯ 28:19ರಲ್ಲಿನ ಪವಿತ್ರಾತ್ಮನ ಮಾತುಗಳಿಂದ ಸ್ಫೂರ್ತಿಗೊಂಡದ್ದಾಗಿ, ಸಭೆಯು ನಂಬಿಗಸ್ತರಿಗೆ ವಾಗ್ದಾನ ಮಾಡಲ್ಪಟ್ಟಿರುವ ಆಶೀರ್ವಾದಗಳಲ್ಲಿ ಜೊತೆಗೂಡಿಕೊಳ್ಳುವಂತೆ ಎಲ್ಲರಿಗೂ ಆಮಂತ್ರಣವನ್ನು ಕೊಡುತ್ತದೆ. ಆಮಂತ್ರಣವು ಎಲ್ಲರಿಗಾಗಿಯೂ ಇರುತ್ತದಾದ್ದರಿಂದ, ಅದನ್ನು **ಕೇಳುವವನು** ಬೇರೆಯವರಿಗೆ ತಿಳಿಸಬೇಕಾಗಿರುತ್ತದೆ: **ಬಾ.**

ದೇಶದಲ್ಲಿ ಒಂದು ಆತ್ಮೀಕ ದಾಹವು ತುಂಬಿರುತ್ತದೆ, ಯಾಕೆಂದರೆ ಜನರು "ಜೀವಜಲದ

ಬುಗ್ಗೆ ... ಬಿಟ್ಟಿದ್ದಾರೆ" ಮತ್ತು "ತಮಗೋಸ್ಕರ ತೊಟ್ಟಿಗಳನ್ನು, ನೀರು ನಿಲ್ಲದ ಬಿರಿದ ತೊಟ್ಟಿಗಳನ್ನು ಕೊರೆದುಕೊಂಡಿದ್ದಾರೆ" (ಯೆರೆಮೀಯ 2:13). ಲೋಕವು "ಅಸಹ್ಯವಾದವುಗಳಿಂದ ತುಂಬಿರುವ" ತನ್ನ ಚಿನ್ನದ ಬಟ್ಟಲನ್ನು ಕೊಡುತ್ತದೆ (ಪ್ರಕಟನೆ 17:4), ಮತ್ತು ಮಾನವರು ಆಳವಾಗಿ ಅದನ್ನು ಕುಡಿಯುತ್ತದೆ; ಆದರೆ ದಾಹವು ಹಿಂದೆಂದಿಗಿಂತಲೂ ಇನ್ನಷ್ಟು ತೀಕ್ಷ್ಣವಾಗಿ ಉರಿಯುತ್ತದೆ. ಆಂತರ್ಯದ ದಾಹವನ್ನು ತೀರಿಸುವದಕ್ಕೆ ಶಕ್ತನಾಗಿರುವ ಏಕೈಕ ವ್ಯಕ್ತಿಯು ಈ ಆಮಂತ್ರಣವನ್ನು ಕೊಡುತ್ತಾನೆ: ಬಾಯಾರಿದವನು ಬರಲಿ. **ಇಷ್ಟವುಳ್ಳವನು ಜೀವಜಲವನ್ನು ಕ್ರಯವಿಲ್ಲದೆ ತೆಗೆದುಕೊಳ್ಳಲಿ.**

**ಕ್ರಯವಿಲ್ಲದೆ** ಎಂಬ ಮಾತುಗಳು ರೋಮಾಂಕರವಾಗಿವೆ. ಬಹಳಷ್ಟು ಸಂಪತ್ತುಳ್ಳ ವ್ಯಕ್ತಿಯು ಸಹ **ಜೀವಜಲವನ್ನು** ಖರೀದಿಸುವದಕ್ಕೆ ಎಂದಿಗೂ ಸಾಧ್ಯವಿಲ್ಲ, ಆದರೆ ಒಬ್ಬ ವ್ಯಕ್ತಿಯು ದಿವಾಳಿಯಾಗಿದ್ದರೂ ಚಿಂತೆಯಿರುವದಿಲ್ಲ - ಯಾಕೆಂದರೆ ಅದು "ಕ್ರಯವಿಲ್ಲದೆ" ಸಿಕ್ಕುತ್ತದೆ. ಹಾಗಿದ್ದರೂ, ಅದನ್ನು ಪಡೆದುಕೊಳ್ಳಬೇಕೆಂದರೆ, ಒಬ್ಬ ವ್ಯಕ್ತಿಯು ಅದರ ಪ್ರಯೋಜನಗಳನ್ನು ಹೊಂದಿಕೊಳ್ಳಬಹುದಾದ ಸ್ಥಳಕ್ಕೆ "ಬರುವದು" ಅವಶ್ಯ. ನೀವು ಕೃಪೆಯಿಲ್ಲದೆ ರಕ್ಷಣೆ ಹೊಂದಲು ಸಾಧ್ಯವಿಲ್ಲ – ಆದರೆ ನೀವು ನಿಮಗಿರುವ ಅಗತ್ಯತೆಯನ್ನು *ಗುರುತಿಸಿಕೊಳ್ಳುವ* (ಮತ್ತಾಯ 5:6) ಮತ್ತು ಕರ್ತನ ಬಳಿಗೆ ಬರುವ ವರೆಗೂ ಅದರ ಮೂಲಕ ರಕ್ಷಣೆಯನ್ನು ಹೊಂದುವದಕ್ಕಾಗುವದಿಲ್ಲ.

## ಸಂದೇಶದ ಕುರಿತು ಸಾಕ್ಷಿ (22:18-21)

**[18]ಈ ಪುಸ್ತಕದ ಪ್ರವಾದನಾವಾಕ್ಯಗಳನ್ನು ಕೇಳುವ ಪ್ರತಿಯೊಬ್ಬನಿಗೆ ನಾನು ಹೇಳುವ ಸಾಕ್ಷಿ**
**ಏನಂದರೆ - ಇವುಗಳಿಗೆ ಯಾವನಾದರೂ ಹೆಚ್ಚು ಮಾತುಗಳನ್ನು ತಂದುಹಾಕಿದರೆ ದೇವರು**
**ಅವನ ಮೇಲೆ ಈ ಪುಸ್ತಕದಲ್ಲಿ ಬರೆದಿರುವ ಉಪದ್ರವಗಳನ್ನು ತಂದುಹಾಕುವನು.**
**[19]ಯಾವನಾದರೂ ಈ ಪ್ರವಾದನಾ ಪುಸ್ತಕದಲ್ಲಿರುವ ಮಾತುಗಳಲ್ಲಿ ಒಂದನ್ನಾದರೂ**
**ತೆಗೆದುಬಿಟ್ಟರೆ ಈ ಪುಸ್ತಕದಲ್ಲಿ ಬರೆದಿರುವ ಪರಿಶುದ್ಧ ಪಟ್ಟಣದಲ್ಲಿಯೂ ಜೀವವೃಕ್ಷದಲ್ಲಿಯೂ**
**ಅವನಿಗಿರುವ ಪಾಲನ್ನು ದೇವರು ತೆಗೆದುಬಿಡುವನು. [20]ಈ ವಿಷಯಗಳಲ್ಲಿ ಸಾಕ್ಷಿಹೇಳುವವನು -**
**ನಿಜವಾಗಿ ಬೇಗ ಬರುತ್ತೇನೆ ಎಂದು ಹೇಳುತ್ತಾನೆ. ಹಾಗೆಯೇ ಆಗಲಿ; ಕರ್ತನಾದ ಯೇಸುವೇ,**
**ಬಾ. [21]ಕರ್ತನಾದ ಯೇಸುವಿನ ಕೃಪೆಯು ಎಲ್ಲರೊಂದಿಗೆ ಇರಲಿ. ಆಮೆನ್.**

**ವಚನಗಳು 18, 19.** ಬೈಬಲ್ ದೇವರಿಂದ ಬಂದದ್ದಾಗಿಯಾದ್ದರಿಂದ, ನಾವು ಅದನ್ನು ಗೌರವಿಸಬೇಕು. ಈ ಯೋಚನೆಯು 18 ಮತ್ತು 19 ವಚನಗಳಲ್ಲಿ ಸಿಕ್ಕುವ ಶಕ್ತಿಶಾಲಿ ಮಾತುಗಳಿಗಿಂತ ಹೆಚ್ಚಯ ಒತ್ತು ಕೊಟ್ಟು ಬೇರೆ ಇನ್ನೆಲ್ಲೂ ವ್ಯಕ್ತಪಡಿಸಲಾಗಿರುವದಿಲ್ಲ. ಪ್ರಕಟನೆ ಪುಸ್ತಕದಲ್ಲಿನ ಭಯಂಕರ **ಉಪದ್ರವಗಳ** ಕುರಿತು ಯೋಚಿಸಿರಿ; ಪುಸ್ತಕಕ್ಕೆ **ಯಾವನಾದರೂ ಹೆಚ್ಚು ಮಾತುಗಳನ್ನು ತಂದುಹಾಕಿದರೆ** ಅಂಥವನು ಆ ಉಪದ್ರವಗಳಿಂದ ಶಾಪಕ್ಕೊಳಗಾಗುತ್ತಾನೆ. **ಜೀವವೃಕ್ಷ** ಸೇರಿದಂತೆ ಪರಲೋಕದ ಅದ್ಭುತಕರವಾದ ಆಶೀರ್ವಾದಗಳನ್ನು ಜ್ಞಾಪಿಸಿಕೊಳ್ಳಿರಿ; **ಯಾವನಾದರೂ** ಪುಸ್ತಕದಿಂದ **ಒಂದನ್ನಾದರೂ ತೆಗೆದುಬಿಟ್ಟರೆ** ಈ ಆಶೀರ್ವಾದಗಳನ್ನು ಆತನು ಆನಂದಿಸಲಾರನು.

ಹೊಸ ಒಡಂಬಡಿಕೆಯೊಳಗೆ ಬೇರೆ ಯಾವ ಪುಸ್ತಕವು ಅಂತಹ ಭಯಹುಟ್ಟಿಸುವ ಬೆದರಿಕೆಗಳಿಂದ ಮುಕ್ತಾಯಗೊಳ್ಳುವದಿಲ್ಲ.ಅವುಗಳನ್ನು ಏಕೆ ಪ್ರಕಟನೆ ಪುಸ್ತಕದಲ್ಲಿ ಸೇರಿಸಲಾಗಿರುತ್ತದೆ? ಬಹುಶಃ ಮಾನವರು ಹೇಗೆ ಈ ಪುಸ್ತಕವನ್ನು

ದುರುಪಯೋಗಪಡಿಸಿಕೊಳ್ಳುವರು ಎಂಬುದನ್ನು ದೇವರು ಎದುರುನೋಡಿರಬಹುದಾಗಿದೆ. ಬಹುಶಃ ಜನರು ತಮ್ಮ ಸ್ವಂತ ವಿಚಾರಗಳನ್ನು ಅದರೊಳಗೆ ಸೇರಿಸುವ ಶೋಧನೆಗೊಳಗಾಗುವರು, ತಮ್ಮ ದೈವಶಾಸ್ತ್ರದೊಂದಿಗೆ ಸಮ್ಮತಿಸದ ಕೆಲವೊಂದು ಭಾಗಗಳನ್ನು ತೆಗೆದು ಹಾಕುವದಕ್ಕೆ ಕೆಲವರು ಬಯಸುವರು ಎಂಬುದು ದೇವರಿಗೆ ಗೊತ್ತಿತ್ತು ಎಂದು ತೋರುತ್ತದೆ.

ಪುಸ್ತಕಕ್ಕೆ ಹೆಚ್ಚು ಮಾತುಗಳನ್ನು ತಂದುಹಾಕುವ ಮತ್ತು ತೆಗೆದು ಹಾಕುವ ಮಾತುಗಳು ಹೊಸ ಒಡಂಬಡಿಕೆಯ ಬೇರೆ ಯಾವ ಪುಸ್ತಕಗಳಲ್ಲಿಯೂ ಸಿಕ್ಕುವದಿಲ್ಲ, ಆದರೆ ಅವುಗಳು ಇಡೀ ಶಾಸ್ತ್ರಗಳ ಕಡೆಗೆ ದೇವರಿಗಿರುವ ಮನೋಭಾವವನ್ನು ಪ್ರತಿಫಲಿಸುತ್ತವೆ. ಇದೇ ರೀತಿಯ ಆಲೋಚನೆಗಳು ಬೈಬಲಿನ ಆರಂಭದಲ್ಲಿ (ಧರ್ಮೋಪದೇಶಕಾಂಡ 4:2) ಮತ್ತು ಮಧ್ಯದಲ್ಲಿ (ಜ್ಞಾನೋಕ್ತಿ 30:6) ಕಂಡು ಬರುತ್ತವೆ. ಪೌಲನು ಕ್ರಿಸ್ತನ ಸುವಾರ್ತೆಯನ್ನು ಕೆಡಿಸಿ ಅಲ್ಲದ್ದನ್ನು ಸೇರಿಸುವವನು ಶಾಪಗ್ರಸ್ಥನಾಗುವನು ಎಂದು ಎಚ್ಚರಿಸಿದ ವೇಳೆ ಇದೇ ಅಂಶವನ್ನು ತಿಳಿಸಿದನು (ಗಲಾತ್ಯ 1:6-9).

ವಾಕ್ಯಕ್ಕೆ *ಹೆಚ್ಚು ತಂದುಹಾಕುವ* ಪಾಪದ ಕಡೆಗೆ ವಿಶೇಷ ಗಮನವನ್ನು ಕೋಡಿರಿ: ತಾವು ಎಲ್ಲಿಯ ವರೆಗೆ ಯಾವದೋ ವಿಧವಾದ ಒಂದು ಬೈಬಲ್ ಆಚಾರವನ್ನು ಪಾಲಿಸುತ್ತಿದ್ದಲ್ಲಿ, ಅದಕ್ಕೆ ಹೆಚ್ಚು ಸೇರಿಸಿದರೆ ಅಥವಾ ಅದನ್ನು ಇನ್ನಷ್ಟು ವಿವರಿಸಿದರೆ ಯಾವ ಹಾನಿಯೂ ಆಗುವದಿಲ್ಲ ಎಂದು ಕೆಲವರು ಯೋಚಿಸುತ್ತಾರೆ. ದೇವರು ಹೇಳುವದೇನೆಂದರೆ ತನ್ನ ವಾಕ್ಯಕ್ಕೆ ಯೋಚಿಸದೆಯೇ ಹೆಚ್ಚಿನದನ್ನು ಕೂಡಿಸುವವರು ಸತ್ಯವನ್ನು ಎದ್ದುಕಾಣುವಂತೆ ತಿರಸ್ಕರಿಸುವವರಷ್ಟೇ ಅಪರಾಧಿಗಳಾಗಿದ್ದಾರೆ ಎಂಬದೆ.

**ವಚನ 20. ಈ ವಿಷಯಗಳಲ್ಲಿ ಸಾಕ್ಷಿಹೇಳುವವನು - ನಿಜವಾಗಿ ಬೇಗ ಬರುತ್ತೇನೆ ಎಂದು ಹೇಳುತ್ತಾನೆ.** ಪ್ರಕಟನೆ ಪುಸ್ತಕದ ಮುಕ್ತಾಯದ ವಚನಗಳಲ್ಲಿನ ಮುಖ್ಯ ವಿಚಾರವು ಕ್ರಿಸ್ತನು ಹಿಂದಿರುಗಿ ಬರುತ್ತಿದ್ದಾನೆ ಎಂಬದೆ ಎಂದು ಹೇಳಲಾಗಿರುತ್ತದೆ (ವ. 7ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಕರ್ತನು ನಂಬಿಗಸ್ತರಿಗೆ ಪ್ರತಿಫಲಗಳನ್ನು ಕೊಡುವದಕ್ಕೋಸ್ಕರ ಹಿಂದಿರುಗಿ ಬರುವನು ಎಂಬ ಯೋಚನೆಯು ಆದಿ ಕ್ರೈಸ್ತರಿಗೆ ಅಮೂಲ್ಯವಾಗಿತ್ತು (2 ತಿಮೊಥೆ 4:8; ತೀತನಿಗೆ 2:13). ಅವರ ಸಂಕಷ್ಟಗಳಲ್ಲಿ ಅದು ಅವರಿಗೆ ಪೋಷಣೆಯನ್ನು ಒದಗಿಸಿತ್ತು; ಮುನ್ನಡೆಯುವಂತೆ ಅದು ಅವರಿಗೆ ಧೈರ್ಯವನ್ನು ತುಂಬಿತ್ತು. ಅವರು ಒಂದು ಮಾತನ್ನು ಬಳಸುತ್ತಿದ್ದರು, “ಮಾರಾನಾಥ” (1 ಕೊರಿಂಥ 16:22), ಇದು ಅರಾಮಿಕ್ ಭಾಷೆಯ ಒಂದು ಪದವಾಗಿದ್ದು ಮೂಲಭೂತವಾಗಿ ಅದರರ್ಥವು “ಕರ್ತನೇ, ಬಾ!” ಇದು ಆತನು ಬರುವನು ಎಂಬುದಾಗಿ ನಂಬಿಕೆಯ ಒಂದು ವ್ಯಕ್ತಪಡಿಸುವಿಕೆ ಹಾಘೂ ಆತನು ತನ್ನ ಬರೋಣವನ್ನು ತ್ವರಿತಗೊಳಿಸಲಿ ಎಂಬ ಒಂದು ಪ್ರಾರ್ಥನೆ ಎರಡೂ ಆಗಿತ್ತು. ಆದಿ ಕ್ರೈಸ್ತರು ತಾವು ಕರ್ತನ ಭೋಜನವನ್ನು ಆಚರಣೆ ಮಾಡುವದಕ್ಕೆ ಸಂಬಂಧ ಪಟ್ಟಂತೆ ಈ ಮಾತನ್ನು ಬಳಸುತ್ತಿದ್ದರು ಎಂಬುದಕ್ಕೆ ಆದಿ ಲೇಖಕರ ಬರಹಗಳಲ್ಲಿ ಸ್ವಲ್ಪ ಮಟ್ಟಿಗೆ ಪುರಾವೆ ಇರುತ್ತದೆ.[7] ನಮ್ಮ ವಾಕ್ಯಭಾಗದ 20ನೇ ವಚನದಲ್ಲಿ ಅದೇ ರೀತಿಯ ಬಲವಾದ ಬಯಕೆಯು ಪ್ರತಿಬಿಂಬಿಸಲ್ಪಟ್ಟಿದೆ: ಯೇಸುವು **ನಿಜವಾಗಿ ಬೇಗ ಬರುತ್ತೇನೆ** ಎಂದು ಹೇಳಿದ ಮೇಲೆ, ಯೋಹಾನನು ಹೀಗೆ ಪ್ರತ್ಯುತ್ತರ ನೀಡಿದನು, **ಹಾಗೆಯೇ ಆಗಲಿ; ಕರ್ತನಾದ ಯೇಸುವೇ, ಬಾ.**

**ವಚನ 21.** ಯೋಹಾನನು 1ನೇ ಅಧ್ಯಾಯದಲ್ಲಿ ಸಭಿಕರನ್ನು ವಂದಿಸಿದ ರೀತಿಯು “ನಿಮಗೆ ಕೃಪೆಯೂ ಶಾಂತಿಯೂ ಆಗಲಿ” (1:4) ಎಂದಾಗಿತ್ತು. ಆತನು 22ನೇ ಅಧ್ಯಾಯವನ್ನು ಈ ಅಂತ್ಯಾಶೀರ್ವಾದದೊಂದಿಗೆ ಮುಕ್ತಾಯಗೊಳಿಸುತ್ತಾನೆ: **ಕರ್ತನಾದ ಯೇಸುವಿನ ಕೃಪೆಯು**

**ಎಲ್ಲರೊಂದಿಗೆ ಇರಲಿ. ಆಮೆನ್.** ಹೀಗೆ ಕೃಪೆಯು ಅವರ ನಿರೀಕ್ಷೆಯ ಮತ್ತು ಆದರಣೆಯ ಆರಂಭವೂ ಅಂತ್ಯವೂ ಆಗಿರುತ್ತದೆಂಬುದು ಕ್ರೈಸ್ತರಿಗೆ ಜ್ಞಾಪಿಸಲ್ಪಡುತ್ತದೆ.

# ಅನ್ವಯಿಸುವಿಕೆ

## "ಕೊನೆಗೆ ದೇವರು ಹೇಳಿದ್ದೇ ನಡೆಯುವದು" (22:6-21)

"ಕೊನೆಗೆ ದೇವರು ಹೇಳಿದ್ದೇ ನಡೆಯುವದು" ಎಂಬ ಶಿರ್ಷಿಕೆಯೊಂದಿಗೆ 22:6-21ರ ಮೇಲೆ ಒಂದು ಪಾಠವನ್ನು ಅಭಿವೃದ್ಧಿಗೊಳಿಸಬಹುದು. ಈ ವಾಕ್ಯಭಾಗದಲ್ಲಿ, ಕೊನೆಗೆ ದೇವರು ಹೇಳಿದಂತೆಯೇ ಆಗುವಂಥ ಐದು ಕ್ಷೇತ್ರಗಳಿರುತ್ತವೆ:

1. ಶಾಸ್ತ್ರಗಳು (ವಚನಗಳು 6, 18, 19).
2. ಯೇಸು (ವಚನಗಳು 7, 12, 13, 16, 20).
3. ದೇವರು (ವಚನಗಳು 8, 9).
4. ಅಧೀನತೆ (ವಚನಗಳು 7, 10-12, 14, 15).
5. ಕೃಪೆ (ವಚನಗಳು 12, 17, 21).

## "ನೀವು ಸಿದ್ಧರಾಗಿರುವಿರೋ?" (22:6-21)

22:6-21ರ ವಿಷಯದಲ್ಲಿ ಅನುಸರಿಸಬಹುದಾದ ಇನ್ನೊಂದು ದಾರಿಯೆಂದರೆ "ನೀವು (ಕ್ರಿಸ್ತನ ಬರೋಣಕ್ಕಾಗಿ) ಸಿದ್ಧರಾಗಿರುವಿರೋ?" ಈ ಕೆಳಗಿನ ಪ್ರಶ್ನೆಗಳನ್ನು ಕೇಳಬಹುದು:

1. ನೀವು ಪ್ರತಿಸ್ಪಂದನೆ ಮಾಡುವವರೋ? (ವಚನಗಳು 6, 7).
2. ನೀವು ಭಕ್ತಿಯುಕ್ತರೋ? (ವಚನಗಳು 8, 9).
3. ನೀವು ನೀತಿವಂತರೋ? (ವಚನಗಳು 10-12).
4. ನೀವು ವಿಮೋಚಿಸಲ್ಪಟ್ಟವರೋ? (ವಚನಗಳು 14-16).
5. ನೀವು ಗ್ರಹಿಸುವವರೋ? (ವಚನಗಳು 16, 17).
6. ನೀವು ಗೌರವಪೂರ್ವಕವಾದವರೋ? (ವಚನಗಳು 18, 19).
7. ನೀವು ಸಂತೋಷಿಸುತ್ತಿರುವಿರೋ? (ವಚನಗಳು 20, 21).

---

**ಅಡಿಟಿಪ್ಪಣಿಗಳು**

[1]Albert H. Baldinger, *Preaching From Revelation: Timely Messages for Troubled Hearts* (Grand Rapids, Mich.: Zondervan Publishing House, 1960), 117. [2]Ray Summers, *Worthy Is the Lamb* (Nashville: Broadman Press, 1951), 214. [3]J. W. Roberts, *The Revelation to John (The Apocalypse),* The Living Word Commentary, ed. Everett Ferguson (Austin, Tex.: Sweet Publishing Co., 1974), 194. [4]Ibid., 199. [5]Burton Coffman, *Commentary on Revelation* (Austin, Tex.: Firm Foundation Publishing House, 1979), 523. [6]Frank Pack, *Revelation,* Part 2 (Austin, Tex.: R. B. Sweet Co., 1965), 70. [7]ಈ ವಾಕ್ಯವು Roberts, 201.